# ಬಡವರ ಮಕ್ಕಳು ಸಹ ಉನ್ನತ ಹುದ್ದೆಗೇರುವ ಅವಕಾಶ ನೀಡಿದ್ದೇ ಭಾರತ ಸಂವಿಧಾನ



**ವಿಜಯಪುರ :** ಬಡ ತಾಯಿಯ ಮಗನೊಬ್ಬ ಜಿಲ್ಲಾಧಿಕಾರಿಯಾಗುವ ಕನಸು ಕಾಣುವುದಕ್ಕೆ ಹಾಗೂ ಕಂಡಂತಹ ಕನಸನ್ನು ನನಸು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಸಿದ್ದು ಭಾರತದ ಸಂವಿಧಾನ. ಜಗತ್ತಿನ ಶ್ರೇಷ್ಠ ಸಂವಿಧಾನ ಎಂದು ಗುರುತಿಸಿಕೊಳ್ಳುವ ನಮ್ಮ ಸಂವಿಧಾನ ಇಲ್ಲದೇ ಹೋಗಿದ್ದರೆ ಈ ದೇಶದ ಸ್ಥಿತಿ ಪಾತಾಳ ಗರಿಡಿಯಂತಾಗುತ್ತಿತ್ತು ಎಂದು ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಕೌಲಗಿ ಹೇಳಿದರು.

ನಗರದ ಎಕ್ಸಲಂಟ್ ಪದವಿ ಪೂರ್ವ ವಿಜ್ಞಾನ ಕಾಲೇಜಿನಲ್ಲಿ ಸಂವಿಧಾನ ದಿನದ ಪ್ರಯುಕ್ತ ಆಯೋಜಿಸಲಾಗಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಒಂದು ದೇಶದ ಆಡಳಿತ ಸೂತ್ರ ಹೇಗಿರಬೇಕು, ದೇಶದ ಪ್ರಜೆಗಳಿಗೆ ಯಾವ ರೀತಿಯ ಹಕ್ಕುಗಳಿರಬೇಕು. ಹಕ್ಕುಗಳಿಗೆ ಪ್ರತಿಯಾಗಿ ಎಂಥಹ ಕರ್ತವ್ಯಗಳನ್ನು ನಾವು ಮಾಡಬೇಕು ಎನ್ನುವುದನ್ನು ತಿಳಿಸಿಕೊಡುವ ಭಾರತೀಯ ಸಂವಿಧಾನ ಜಗತ್ತು ಕಂಡಂತಹ ಅತ್ಯುತ್ತಮವಾದ ಸಂವಿಧಾನ ಎಂದು ಗುರುತಿಸಿಕೊಳ್ಳುತ್ತದೆ ಎಂದರು.

ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಬೇರೆ ಬೇರೆ ದೇಶಗಳ ಸಂವಿಧಾನಗಳನ್ನು ಓದಿ ಅರ್ಥೈಸಿಕೊಂಡು ನಮ್ಮ ದೇಶಕ್ಕೆ ಎಂಥಹ ಸಂವಿಧಾನ ಬೇಕು ಎನ್ನುವುದನ್ನು ತಿಳಿಸಿಕೊಟ್ಟರು. ಅಸ್ಪೃಶ್ಯತೆಯ ಬೆಂಕಿಯಲ್ಲಿ ಸ್ವತಃ ಬೆಂದಿದ್ದ ಬಾಬಾಸಾಹೇಬರು ಭಾರತದ ಸಂವಿಧಾನ ರಚನೆಯಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ನಿಭಾಯಿಸುವುದರೊಂದಿಗೆ ಸಮಾನತೆಯ ಸಂವಿಧಾನ ಜಾರಿಯಾಗುವುದಕ್ಕೆ ಕಾರಣರಾದರು. ಇಷ್ಟು ಅದ್ಭುತವಾದ ಸಂವಿಧಾನವನ್ನು ಪಡೆದುಕೊಂಡಿದ್ದರೂ ಸಹ ಅದರ ಆಶಯವನ್ನು ಪೂರ್ಣಗೊಳಿಸುವಲ್ಲಿ ಭಾರತೀಯರು ಇನ್ನೂ ಯಶಸ್ವಿಯಾಗುತ್ತಿಲ್ಲ ಎಂದು ಖೇದ ವ್ಯಕ್ತಪಡಿಸಿದರು.

ಇತ್ತೀಚೆಗೆ ಲಂಡನ್‌ನಲ್ಲಿ ಜರುಗಿದ ಪಾರ್ಲಿಮೆಂಟ್ ನಾಯಕತ್ವ ಶೃಂಗ ಸಭೆಯಲ್ಲಿ ಪಾಲ್ಗೊಂಡು ಭಾರತಕ್ಕೆ ಆಗಮಿಸಿದ ವಿಚಾರಗಳನ್ನು ಹಂಚಿಕೊಂಡ ಅವರು, ಒಂದು ಕಾಲದಲ್ಲಿ ಭಾರತವನ್ನು ಬ್ರಿಟಿಷರು ಆಳ್ವಿಕೆ ಮಾಡಿದ್ದರು. ಭಾರತೀಯರನ್ನು ಕೊಳ್ಳೆ ಹೊಡೆದು ಇಂಗ್ಲಂಡನ್ನು ಶ್ರೀಮಂತ ಮಾಡಿದರು. ಆದರೆ ಬದಲಾದ ಕಾಲಘಟ್ಟಕ್ಕೆ ಅನುಗುಣವಾಗಿ ಆ ದೇಶವನ್ನು ಆಳುವ ಕೆಲಸ ಭಾರತೀಯರು ಮಾಡುತ್ತಿದ್ದಾರೆ. ಭಾರತೀಯ ಮೂಲದವರು ಬ್ರಿಟನ್ ಪ್ರಧಾನಿಯಾಗಿ, ಸಂಸತ್ ಸದಸ್ಯರಾಗಿ, ಕಾರ್ಪೋರೇಟರ್‌ಗಳಾಗಿ ಆ ದೇಶದಲ್ಲಿ ಆಳ್ವಿಕೆ ಮಾಡುತ್ತಿದ್ದಾರೆ. ಇದನ್ನು ನೋಡಿದರೆ ಮುಂದಿನ ದಿನಗಳಲ್ಲಿ ಭಾರತ ವಿಶ್ವಗುರುವಾಗಿ ಮತ್ತೆ ತಲೆ ಎತ್ತುವುದರಲ್ಲಿ ಎರಡು ಮಾತಿಲ್ಲ. ಹಾಗಾಗಾಬೇಕಾದರೆ ಭಾರತ ಸಂವಿಧಾನ ನಮಗೆ ನೀಡಿರುವ ಅವಕಾಶಗಳನ್ನು ಸ್ವಾರ್ಥ ಸಾಧನೆಗೆ ಬಳಸಿಕೊಳ್ಳದೆ, ಸಮಾಜ ಸುಧಾರಣೆಗೆ, ದೇಶದ ಅಭಿವೃದ್ಧಿಗೆ, ಸಂವಿಧಾನದ ಆಶಯಗಳ ಈಡೇರಿಕೆಗೆ ಬಳಸಿಕೊಂಡಿದ್ದೇ ಆದಲ್ಲಿ ಇಡೀ ಜಗತ್ತಿಗೆ ಭಾರತ ಹಿರಿಯಣ್ಣನಾಗುತ್ತಾನೆ. ಆಳ್ವಿಕೆ ಮಾಡಿದ ರಾಷ್ಟ್ರಗಳೆಲ್ಲ ಕೈ ಕಟ್ಟಿ ನಿಲ್ಲುತ್ತವೆ. ಆ ನಿಟ್ಟಿನಲ್ಲಿ ನಮ್ಮ ಯುವಕರು ಪ್ರಯತ್ನಿಸಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ನವಜೀವನ ಬ್ಯಾಂಕ್‌ನ ಮ್ಯಾನೇಜರ್ ವಿ.ಡಿ. ಮಾದನಶೆಟ್ಟಿ, ಪ್ರಾಚಾರ್ಯ ಶ್ರೀಕಾಂತ ಕೆ.ಎಸ್ ಮಾತನಾಡಿದರು.

ಇದೇ ಸಂದರ್ಭದಲ್ಲಿ ಸ್ವದೇಶಕ್ಕೆ ಆಗಮಿಸಿದ ಬಸವರಾಜ ಕೌಲಗಿ ಅವರನ್ನು ಎಕ್ಸಲಂಟ್ ಕಾಲೇಜಿನ ಸರ್ವ ಸಿಬ್ಬಂದಿ ಬಳಗ, ವಿದ್ಯಾರ್ಥಿ ನಿಲಯದ ನಿಲಯಪಾಲಕರು ಸನ್ಮಾನಿಸಿ ಅಭಿನಂದಿಸಿದರು. ವಿದ್ಯಾರ್ಥಿನಿ ಶೃತಿ ವಾಲೀಕಾರ ಪ್ರಾರ್ಥಿಸಿದರು, ಉಪನ್ಯಾಸಕ ರಮೇಶ ಬಾಗೇವಾಡಿ ಸ್ವಾಗತಿಸಿದರು. ಶರಣಗೌಡ ಪಾಟೀಲ ನಿರೂಪಿಸಿದರು, ರವಿ ಕಲ್ಲೂರಮಠ ವಂದಿಸಿದರು.

# ಲಾಡ್ಜ್‌ನಲ್ಲಿ ವೇಶ್ಯಾವಾಟಿಕೆ: ಮೂವರು ವಶಕ್ಕೆ

**ವಿಜಯಪುರ :** ಅಕ್ರಮವಾಗಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಜಿಲ್ಲೆಯ ತಾಳಿಕೋಟೆ ಪಟ್ಟಣದ ಲಾಡ್ಜ್ ಮೇಲೆ ಪೊಲೀಸರು ದಾಳಿ ನಡೆಸಿ ಮೂವರನ್ನು ವಶಕ್ಕೆ ಪಡೆದಿದ್ದು, ಇಬ್ಬರು ಮಹಿಳೆಯರನ್ನು ಮಹಿಳಾ ಸಾಂತ್ವನ ಕೇಂದ್ರಕ್ಕೆ ಸೇರಿಸಲಾಗಿದೆ.

ವೇಶ್ಯಾವಾಟಿಕೆ ನಡೆಸುತ್ತಿದ್ದ ಲಾಡ್ಜ್ ಮೇಲೆ ಪೊಲೀಸರು ದಾಳಿ ಮಾಡಿ ಲಾಡ್ಜ್ ಮ್ಯಾನೇಜರ್ ಸೇರಿದಂತೆ ಮೂವರನ್ನು ವಶಕ್ಕೆ ಪಡೆದು ಪೊಲೀಸರು ಹೆಚ್ಚಿನ ವಿಚಾರಣೆ ನಡೆಸಿದ್ದಾರೆ. ವಿಜಯಪುರ ಜಿಲ್ಲೆಯ ತಾಳಿಕೋಟೆ ಪಟ್ಟಣದ ಲಾಡ್ಜ್ ನಲ್ಲಿ ಅಕ್ರಮವಾಗಿ ವೇಶ್ಯಾವಾಟಿಕೆ ನಡೆಯುತ್ತಿರುವ ಬಗ್ಗೆ ಖಚಿತ ಮಾಹಿತಿ ಆಧರಿಸಿ ತಾಳಿಕೋಟೆ ಪೊಲೀಸರು ಡಿವೈ ಎಸ್ ಪಿ ಬಲ್ಲಪ್ಪ ನಂದಗಾವಿ ನೇತೃತ್ವದಲ್ಲಿ ದಾಳಿ ಮಾಡಿದ್ದಾರೆ. ದಾಳಿ ವೇಳೆ ಶರಣು ನಾಗಪ್ಪ ನಾಲತವಾಡ,(46) ಶರಣಪ್ಪಶಿವಪ್ಪಬಳೂಲಗಿ(55),ಶಿವಯ್ಯಶಾಂತಯ್ಯಾ ಮದ್ದಾಲಿ(29)ಎಂಬುವರನ್ನವಶಕ್ಕೆಪಡೆಯಲಾಗಿದ್ದು. ಅನೈತಿಕ ಚಟುವಟಿಕೆಯಲ್ಲಿ ಭಾಗಿಯಾದ ಇಬ್ಬರು ಮಹಿಳೆಯರನ್ನು ಮಹಿಳಾ ಸಾಂತ್ವನ ಕೇಂದ್ರಕ್ಕೆ ಕಳಿಸಲಾಗಿದೆ. ಈ ಕುರಿತು ತಾಳಿಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬುದ್ಧ ಗಯಾ ಸಂಪೂರ್ಣ ಅಧಿಕಾರ ಬೌದ್ಧರಿಗೆ ನೀಡಲು ಒತ್ತಾಯಿಸಿ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಕೆ



**ವಿಜಯಪುರ:** ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ ವಾದ) ಜಿಲ್ಲಾ ಸಮಿತಿ, ವಿಜಯಪುರ ವತಿಯಿಂದ ಬಿ.ಟಿ. ಆಕ್ಟ್ 1949 ಕಾಯ್ದೆಯನ್ನು ರದ್ದು ಪಡಿಸಲು ಆಗ್ರಹಿಸಿ ಜಿಲ್ಲಾಧಿಕಾರಿ ಟಿ ಭೂಬಾಲನ್ ಅವರ ಮೂಲಕ ಬುಧವಾರ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಇದೇ ಸಂದರ್ಭದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಾದ ಜಿಲ್ಲಾ ಸಮಿತಿ ಪ್ರಧಾನ ಸಂಚಾಲಕ ಸಂಜು ಕಂಬಾಗಿ ಮಾತನಾಡಿ, ಗಯಾ ಜಗತ್ತಿನ ಬೌದ್ಧರಿಗೆಲ್ಲ ಪರಮ ಪವಿತ್ರವಾದ ಸ್ಥಳ. ರಾಜಕುಮಾರ ಸಿದ್ಧಾರ್ಥ ಬೋದಿಜ್ಞಾನಪಡೆದು ಭಗವಾನ್ ಬುದ್ಧನಾದ ಪಾವನ ಸ್ಥಳ. ಈ ಕ್ಷೇತ್ರ ಬುದ್ಧನ ಕಾಲದಿಂದಲೂ ಪೂಜನೀಯವಾಗಿದೆ. ಸಾಮ್ರಾಟ್ ಅಶೋಕನು ಸೇರಿ ಈ ದೇಶದ ಅನೇಕ ರಾಜ ಮಹಾರಾಜರು ಮತ್ತು ಬರ್ಮಾ, ಶ್ರೀಲಂಕಾ, ಥೈಲಾಂಡ್, ಜಪಾನ್ ಮತ್ತು ಇನ್ನಿತರ ದೇಶಗಳ ರಾಜರು ಹಾಗೂ ಬೌದ್ಧ ಉಪಾಸಕರು ಈ ಕ್ಷೇತ್ರ ವೃದ್ಧಿಗಾಗಿ ಶ್ರದ್ಧಾಪೂರ್ವಕ ಕೊಡುಗೆ ನೀಡಿರುವುದು ಇತಿಹಾಸ. ಭಾರತದಲ್ಲಿ ಹುಟ್ಟಿ ಏಷ್ಯಾ ಖಂಡದ ಎಲ್ಲಾ ದೇಶಗಳಲ್ಲಿ ಪ್ರಪಂಚದಾದ್ಯಂತ ವಿಜೃಂಭಿಸಿದೆ. ಏಷ್ಯದ ಬೆಳಕು ಎಂದು ಪ್ರಖ್ಯಾತವಾದ ಬೌದ್ಧ ಧರ್ಮ ಕಾಲಾನುಕ್ರಮದಲ್ಲಿ ಮಾತೃ ಭೂಮಿಯಲ್ಲಿ ಮುಸ್ಲಿಂ ಮತ್ತು ಹಿಂದೂಗಳ ಆಕ್ರಮಣಕ್ಕೆ ತುತ್ತಾಗಿ ಕಣ್ಮರೆಯಾಯಿತು ಎಂದರು.

ಪ್ರಬುದ್ಧ ಭಾರತದ ಮಹಾಬೋಧಿ ಮಹಾವಿಹಾರದ ಮುಕ್ತಿ ಆಂದೋಲವನ್ನು 1992 ರಂದು ಬಂದ ಆರ್ಯ ನಾಗಾರ್ಜುನ ಸುರೈ ಸಸಾಯಿಯವರ ನೇತೃತ್ವದಲ್ಲಿ ಅಂಬೇಡ್ಕರ್ ಅನುಯಾಯಿಗಳು ಮುಂದುವರೆಸಿದರು. ರಾಷ್ಟ್ರ ಮಟ್ಟದಲ್ಲಿ ಹಲವು ಸುತ್ತಿನ ಹೋರಾಟಗಳು ಜರುಗಿದವು, ಬಿ.ಟಿ. ಆಕ್ಟ 1949 ರ ಕಾಯ್ದೆಯಲ್ಲಿ ಹಾಗೂ ಬಿಟಿಎಂಸಿಯಲ್ಲಿ ಕೆಲವು ಬದಲಾವಣೆಗಳು ಆದವೇ ಹೊರತು ಸಂಪೂರ್ಣ ರದ್ದು ಆಗಲಿಲ್ಲ. ಈ ಸಂಬಂಧ ಕಳೆದ 15 ವರ್ಷಗಳಿಂದ ಬೌದ್ಧರು ನಡೆಸಿದ ಕಾನೂನು ಹೋರಾಟಕ್ಕೆ ಇನ್ನೂ ಜಯ ಸಿಕ್ಕಿಲ್ಲ. ಪ್ರಸ್ತುತ ಅಖಿಲ ಭಾರತ ಬೌದ್ಧ ವೇದಿಕೆ ಎಲ್ಲಾ ವಿಚಾರಧಾರೆಯ ಬೌದ್ಧ ಸಂಘ ಸಂಸ್ಥೆಗಳನ್ನು ಹಾಗೂ ದೇಶದ ಅಂಬೇಡ್ಕರ್ ಅನುಯಾಯಿಗಳನ್ನು ಒಂದೇ ವೇದಿಕೆಗೆ ತಂದು ಹೋರಾಟವನ್ನು ಆರಂಭಿಸಿದೆ ಎಂದು ಹೇಳಿದರು.

ರಾಜ್ಯ ಮಹಿಳಾ ಸಂಘಟನಾ ಸಂಚಾಲಕಿ ಪ್ರತಿಭಾ ಹೊಸಮನಿ ಮಾತನಾಡಿ, ಈ ದೇಶದ ಬೌದ್ಧ ಸಮುದಾಯ ಮತ್ತು ಅಂಬೇಡ್ಕರ್ ಅನುಯಾಯಿಗಳು ಸಂವಿಧಾನದತ್ತಧಾರ್ಮಿಕಅವಕಾಶಗಳಿಂದ ವಂಚಿತರಾಗಿದ್ದಾರೆ.

ಬಿ.ಟಿ. ಆಕ್ಟ್ 1949 ನ್ನು ರದ್ದುಪಡಿಸಿ ಬುದ್ಧಗಯಾದ ಮಹಾಬೋಧಿ ಮಹಾವಿಹಾರದಆಡಳಿತಸಂಪೂರ್ಣವಾಗಿ ಬೌದ್ಧರಿಗೆ ನೀಡಬೇಕೆಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಮಹಿಳಾ ಒಕ್ಕೂಟ ಜಿಲ್ಲಾ ಸಂಚಾಲಕಿ ಕವಿತಾ ವಗ್ಗರ, ಜಿಲ್ಲಾ ಸಂಘಟಕರಾದ ಯಲ್ಲಪ್ಪ ಕಾಂಬಳೆ, ಚೈತನ ತೊರವಿ ಜಿಲ್ಲಾ ಸಂಘಟನಾ ಸಂಚಾಲಕ ಶಂಕರ ಚಲವಾದಿ, ನಗರ ಸಂಚಾಲಕ ನಕುಶಾ ಹೊಸಮನಿ, ಪ್ರದೀಪ ಚಲವಾದಿ, ಭೀಮಣ್ಣ ಹಂಚಿನಾಳ, ಸುರೇಶ ಬಬಲೇಶ್ವರ, ಭಾಸ್ಕರ ಬೋರಗಿ, ಸುಖದೇವ ಕಟ್ಟಿಮನಿ, ತುಕಾರಾಮ ಮಮದಾಪೂರ, ದತ್ತಾತ್ರೇಯ ಆಲಮೇಲಕರ ಮತ್ತಿತರರು ಉಪಸ್ಥಿತರಿದ್ದರು.

# ಬೀದಿ ಬದಿ ವ್ಯಾಪಾರಸ್ಥರಿಗೆ ವೆಂಡಿಂಗ್ ಝೋನ್: ಆಟೋ-ದ್ವಿಚಕ್ರ ವಾಹನಗಳ ನಿಲುಗಡೆಗೆ ಪ್ರತ್ಯೇಕ ವ್ಯವಸ್ಥೆ



**ವಿಜಯಪುರ:** ವಿಜಯಪುರ ನಗರದ ಬೀದಿ ಬದಿ ವ್ಯಾಪಾರಸ್ಥರಿಗೆ ವೆಂಡಿಂಗ್ ಝೋನ್ ಜಾಗದ ವ್ಯವಸ್ಥೆ ಹಾಗೂ ಆಟೋ-ದ್ವಿಚಕ್ರ ವಾಹನಗಳ ನಿಲುಗಡೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಲು ಜಾಗ ಗುರುತಿಸಲಾಗಿದ್ದು, ಸೂಚಿಸಿರುವ ಸ್ಥಳಗಳಲ್ಲಿ ಬೀದಿಬದಿ ವ್ಯಾಪಾರಸ್ಥರು ವ್ಯಾಪಾರ ಕೈಗೊಳ್ಳದೇ ಇರುವುದು ಮತ್ತು ನಿಗದಿತ ಸ್ಥಳಗಳಲ್ಲಿ ವಾಹನಗಳನ್ನು ನಿಲುಗಡೆ ಮಾಡದೇ ಇರುವುದನ್ನು ಕಂಡು ಬಂದಲ್ಲಿ ಅಂತಹವರ ಮೇಲೆ ಕಾನೂನುರಿತ್ಯಕ್ರಮಕೈಗೊಂಡು ದಂಡ ವಿಧಿಸಲಾಗುವುದು ಎಂದು ಮಹಾನಗರ ಪಾಲಿಕೆ ಆಯುಕ್ತ ವಿಜಯಕುಮಾರ ಮೆಕ್ಕಳಕಿ ಅವರು ತಿಳಿಸಿದ್ದಾರೆ.

ವಿಜಯಪುರ ನಗರದ ಬೀದಿ ಬದಿ ವ್ಯಾಪಾರಸ್ಥರು ಎಲ್ಲೆಂದರಲ್ಲಿ ವ್ಯಾಪಾರ ಮಾಡುವುದನ್ನು ತಡೆಗಟ್ಟಲು ಉಚ್ಚನ್ಯಾಯಾಲಯದ ಆದೇಶದಂತೆ, ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಮಹಾಪೌರರರ ಮಾರ್ಗದರ್ಶನ ಮತ್ತು ಜಿಲ್ಲಾಧಿಕಾರಿಗಳ ನಿರ್ದೇಶನದಲ್ಲಿ ನಗರದ ಸೌಂದರ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ನಗರದ ನೆಹರು ಮಾರ್ಕೆಟ್ ಹಿಂಭಾಗ, ಎಂ.ಆರ್.ಹೋಟೆಲ್ ಹತ್ತಿರ, ಕೆಎಸಆರಟಿಸಿ ಡಿಪೋ ಪಕ್ಕ, ಅಂಬೇಡ್ಕರ್ ಕ್ರೀಡಾಂಗಣ ಎದುರುಗಡೆ, ಸೈನಿಕಶಾಲೆ ಜಿಮಖಾನಾ ಕ್ಲಬ್ ಹಿಂದೆ, ಹಾಗೂ ಆಹಾರ ಮಾರಾಟಕ್ಕೆ ಇಂಡಿ ರೋಡ ಕ್ರೀಡಾಂಗಣದ ಹತ್ತಿರ, ಜಾಗಗಳನ್ನು ಗುರುತಿಸಿ, ಈ ಸ್ಥಳಕ್ಕೆ ಬೀದಿ ಬದಿ ವ್ಯಾಪಾರಸ್ಥರರೊಂದಿಗೆ ಮಹಾನಗರ ಪಾಲಿಕೆ ಆಯುಕ್ತರು ಇಂದು ಭೇಟಿ ನೀಡಿದ್ದು, ಈ ಸಂದರ್ಭದಲ್ಲಿ ಬೀದಿ ಬದಿ ವ್ಯಾಪಾರಸ್ಥರು ಸಂತಸ ವ್ಯಕ್ತಪಡಿಸಿದ್ದಲ್ಲದೇ, ಮುಂದಿನ ದಿನಗಳಲ್ಲಿ ಈ ಜಾಗಗಳಲ್ಲಿಯೇ ವ್ಯಾಪಾರ ಕೈಗೊಳ್ಳುವುದಾಗಿ ತಿಳಿಸಿದರು.

ಜನದಟ್ಟಣೆ ನಿಯಂತ್ರಣ ಹಾಗೂ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಗಾಂಧಿ ಚೌಕ್ ಪೊಲೀಸ್ ಠಾಣೆಯಲ್ಲಿ ಬೀದಿ ಬದಿ ವ್ಯಾಪಾರಸ್ಥರು, ಆಟೋ ಮತ್ತು ಇತರೆ ದ್ವಿಚಕ್ರ ವಾಹನಗಳ ಮಾಲೀಕರೊಂದಿಗೆ ಸಭೆ ನಡೆಸಿ, ನಿಗದಿ ಸ್ಥಳಗಳಲ್ಲಿ ಮಾತ್ರ ವಾಹನಗಳನ್ನು ನಿಲುಗಡೆ ಮಾಡಬೇಕು. ನಿಷೇಧಿತ ಪ್ರದೇಶಗಳಲ್ಲಿ ಯಾವುದೇ ವಾಹನಗಳನ್ನು ನಿಲುಗಡೆ ಮಾಡಬಾರದು.

ಈ ಕುರಿತಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಚಾರ ಪೊಲೀಸ್ ಅಧಿಕಾರಿಗಳಿಗೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಂಕರ ಮಾರಿಹಾಳ ಸೂಚನೆ ನೀಡಿದರಲ್ಲದೇ, ವೆಂಡಿಂಗ್ ಝೋನಗಳಲ್ಲಿ ಮಾತ್ರ ವ್ಯಾಪಾರ ವಹಿವಾಟು ಕೈಗೊಳ್ಳಬೇಕು. ನಿಗದಿತ ಸ್ಥಳಗಳಲ್ಲಿ ವಾಹನ ನಿಲುಗಡೆ ಹಾಗೂ ವ್ಯಾಪಾರ ವಹಿವಾಟು ಮಾಡದವರ ಮೇಲೆ ಕಾನೂನು ರೀತಿ ಕ್ರಮ ಕೈಗೊಂಡು ಸೂಕ್ತ ದಂಡ ವಿಧಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಈಸಂದರ್ಭದಲ್ಲಿಪೊಲೀಸ್ ಇಲಾಖೆ ಇತರೆ ಅಧಿಕಾರಿಗಳು, ಇತರರು ಉಪಸ್ಥಿತರಿದ್ದರು.

# ಆಧ್ಯಾತ್ಮ ಪ್ರವಚನದ ಪರಿಕರ ಬಿಡುಗಡೆ



**ಬನಹಟ್ಟಿ :** ನಗರದ ಹಿರೇಮಠದಲ್ಲಿ ಡಿಸೆಂಬರ್ 11 ರಿಂದ 17 ವರೆಗೆ ಜರುಗುವ ಶ್ರೀ ಶಾಂತವೀರ ಶಿವಾಚಾರ್ಯರ 34 ನೇ ಚಿರಲಿಂಗಾಂಗ ಸಾಮರಸ್ಯ ಆಧ್ಯಾತ್ಮ ಪ್ರವಚನ ಹಾಗು ಅಯ್ಯಾಚಾರ ಸಾಮೂಹಿಕ ಲಿಂಗದೀಕ್ಷೆ ಕಾರ್ಯಕ್ರಮದ ಪರಿಕರಗಳನ್ನು ಬಿಡುಗಡೆಗೊಳಿಸಲಾಯಿತು.

ಪ್ರತಿದಿನ ಸಂಜೆ 6-30 ರಿಂದ ಜರುಗುವ ಆಧ್ಯಾತ್ಮಿಕ ಪ್ರವಚನದ ಸಾನಿಧ್ಯವನ್ನು ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯರು ವಹಿಸಲಿದ್ದಾರೆ. ಜಮಖಂಡಿ ಕಲ್ಯಾಣಮಠದ ಗೌರಿಶಂಕರ ಶಿವಾಚಾರ್ಯರ ನೇತೃತ್ವದಲ್ಲಿ ಹಿರೇಮಠದ ಶರಣಬಸವ ಶಿವಾಚಾರ್ಯರು ಅಧ್ಯಕ್ಷತೆ ವಹಿಸಲಿದ್ದಾರೆ. ಬಂಡಿಗಣಿಯ ಅನ್ನದಾನೇಶ್ವರ ಶ್ರೀಗಳ ಸಮ್ಮುಖದಲ್ಲಿ ಜಮಖಂಡಿ ಶಾಸಕ ಸಿದ್ದು ಸವದಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಸಿದ್ದು ಸವದಿ, ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ, ಶೇಖರ ಮಾಲಾಪುರ, ಶ್ರೀಪಾದ ಬಾಣಕಾರ, ಶ್ರೀಶೈಲ ಧಬಾಡಿ, ಮಲ್ಲಿಕಾರ್ಜುನ ತುಂಗಳ ಅತಿಥಿಗಳಾಗಿ ಭಾಗವಹಿಸಿದ್ದಾರೆ.

ಪ್ರತಿ ದಿನ ಜೀವನ ದರ್ಶನ ವಿಷಯದಡಿ ಚಟ್ಟರಕಿಯ ಶಂಕ್ರಯ್ಯಾ ಶಾಸ್ತ್ರಿಗಳಿಂದ ಪ್ರವಚನ ನಡೆಯಲಿದೆ.

ಪರಿಕರಗಳ ಬಿಡುಗಡೆ ಸಂದರ್ಭ ಚನ್ನವೀರಪ್ಪ ಹಾದಿಮನಿ, ದಾನಪ್ಪ ಹುಲಜತ್ತಿ, ಸುಭಾಸ ಜಾಡಗೌಡ, ಪಂಡಿತ ಪಟ್ಟಣ, ಪ್ರಶಾಂತ ಕೊಳಕಿ, ಶಿವಕುಮಾರ ಜುಂಜಪ್ಪನವರ, ಗುರುಸಿದ್ದಪ್ಪ ಚನಾಳ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ರಬಕವಿಯಿಂದ ಗುಡ್ಡಾಪುರಕ್ಕೆ ಪಾದಯಾತ್ರೆ



**ರಬಕವಿ :** ಪ್ರತಿ ವರ್ಷದಂತೆ ಈ ವರ್ಷವೂ ಕೊರೆಯುವ ಚಳಿಯಲ್ಲಿ ಚಿಕ್ಕ ಮಕ್ಕಳು, ಯುವಕರು, ವಯಸ್ಕರು ಹಾಗೂ ವಯೋವೃದ್ಧರು ಸೇರಿದಂತೆ ರಬಕವಿ ಬನಹಟ್ಟಿ, ರಾಂಪುರ, ಹನಗಂಡಿ, ಹೊಸೂರ ಸೇರಿದಂತೆ ಅನೇಕ ಗ್ರಾಮಗಳಿಂದ ಎರಡು ಸಾವಿರಕ್ಕೂ ಅಧಿಕ ಭಕ್ತಾದಿಗಳು ಪಾದಯಾತ್ರೆ ಮೂಲಕ ಮಹಾರಾಷ್ಟ್ರದ ಗುಡ್ಡಾಪುರಲ್ಲಿ ಜರುಗುವ ದಾನಮ್ಮದೇವಿ ಜಾತ್ರೆ ನಿಮಿತ್ಯ ಆಕೆಯ ದರ್ಶನಕ್ಕಾಗಿ ಬುಧವಾರ ಬೆಳಿಗ್ಗೆ ಅವಳಿ ನಗರದಿಂದ ಪಾದಯಾತ್ರೆ ಮೂಲಕ ತೆರಳಿದರು.

ಬೆಳಗಿನ 5 ಕ್ಕೆ ರಬಕವಿ ನಗರದ ದಾನಮ್ಮದೇವಿ ದೇವಸ್ಥಾನದಲ್ಲಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ರಬಕವಿ ದಾನಮ್ಮದೇವಿ ಪಾದಯಾತ್ರಾ ಕಮೀಟಿಯ ಸರ್ವಸದಸ್ಯರು ಪಾದಯಾತ್ರೆಗೆ ಚಾಲನೆ ನೀಡಿದರು. ಪಾದಯಾತ್ರೆಗೆ ತೆರಳುವ ಮಾರ್ಗದಲ್ಲಿ ರಬಕವಿ ಶಿಕ್ಕಲಗಾರ ಸಮಾಜದ ಬಾಂಧವರ ನೇತೃತ್ವದಲ್ಲಿ ಸಾವಿರಾರು ಮುತ್ತೈದೆಯರಿಗೆ ಉಡಿ ತುಂಬುವುದು ಮತ್ತು ಎಲ್ಲ ಪಾದಯಾತ್ರೆ ಭಕ್ತರಿಗೆ ಅಲ್ಪೋಪಹಾರದ ವ್ಯವಸ್ಥೆ ಮಾಡಿ ಭಕ್ತಿ ಸೇವೆ ಮೆರೆದರು.

5-30 ರಿಂದಲೇ ಸಮೀಪದ ಕೃಷ್ಣಾ ನದಿ ತೀರದಿಂದ ಎರಡು ಬೋಟಗಳ ಸಹಾಯದಿಂದ ಸಾವಿರಾರು ಪ್ರಯಾಣಿಕರು ಸುರಕ್ಷಿತವಾಗಿ ಆ ದಡಕ್ಕೆ ಸೇರಿದರು. ದಾರಿಯುದ್ದಕ್ಕೂ ಅನೇಕ ದಾನಿಗಳು ದಾಸೋಹ ಸೇವೆಯಲ್ಲಿ ತೊಡಗಿದ್ದರು. ಪಾದಯಾತ್ರಿಗಳು ಮಹೀಷವಾಡಗಿ ಗ್ರಾಮದ ಮಾರ್ಗವಾಗಿ ಅಥಣಿ ತಾಲೂಕಿನ ಕಕಮರಿ ಮೂಲಕ ವಿಶೇಷ ಜಾತ್ರೆ ಹಾಗೂ ಕಾರ್ತಿಕ ಮಾಸದ ನಿಮಿತ್ಯ ಲಕ್ಷ ದೀಪೋತ್ಸವ ಸಮಾರಂಭದಲ್ಲಿ ಭಾಗಿಯಾಗಿ ಭಕ್ತರು ತಮ್ಮ ಊರುಗಳಿಗೆ ಮರಳಲಿದ್ದಾರೆ.

## ಶಿಷ್ಯವೇತನ ವಿತರಣಾ ಕಾರ್ಯಕ್ರಮ

# ಕೈಗಾರಿಕೆಗಳಿಗೆ ಆರ್ಥಿಕ ಅಭಿವೃದ್ಧಿ ಜೊತೆಗೆ ಸಾಮಾಜಿಕ ಜವಾಬ್ದಾರಿಯು ಮುಖ್ಯ: ದಿನೇಶ ಶರ್ಮಾ

## ಇಲ್ಲಿಯವರೆಗೆ 11 ಸಾವಿರ ವಿದ್ಯಾರ್ಥಿಗಳಿಗೆ ಸಹಾಯ: ಬಡ ವಿದ್ಯಾರ್ಥಿಗಳ ಶೈಕ್ಷಣೀಕ ಅಭಿವೃದ್ಧಿಗೆ ನೆರವು



**ಮಹಾಲಿಂಗಪುರ :** ಒಂದು ದೇಶದ ಅಭಿವೃದ್ದಿಯಲ್ಲಿ ಔದ್ಯೋಗೀಕರಣದ ಪಾತ್ರವು ಮುಖ್ಯವಾಗಿದೆ. ಕೈಗಾರಿಕೆಗಳ ಅಭಿವೃದ್ದಿಯಿಂದ ಉದ್ಯೋಗವಕಾಶಗಳು ಮತ್ತು ಆರ್ಥಿಕ ಅಭೀವೃದ್ದಿ ಸಾಧ್ಯ. ಜೊತೆಗೆ ಕೈಗಾರಿಕೆಗಳಿಗೆ ಸಾಮಾಜಿಕ ಜವಾಬ್ದಾರಿಯು ಬಹಳ ಮುಖ್ಯವಾಗಿದೆ ಎಂದು ಸಮೀರವಾಡಿಯ ಗೋದಾವರಿ ಕಾರ್ಖಾನೆಯ ತಾಂತ್ರೀಕ ವಿಭಾಗದ ಮುಖ್ಯಸ್ಥರಾದ ದಿನೇಶ ಶರ್ಮಾ ಹೇಳಿದರು.

ಬುಧವಾರ ಸಮೀಪದ ಸೈದಾಪುರ ಸಮೀರವಾಡಿ ಶಿವಲಿಂಗೇಶ್ವರ ದೇವಸ್ಥಾನದ ಸಭಾಭವನದಲ್ಲಿ ಸೋಮಯ್ಯ ಗ್ರಾಮೀಣ ವಿಕಾಸ ಕೇಂದ್ರ ಸಮೀರವಾಡಿ ಹಾಗೂ ವಿದ್ಯಾ ವಿಹಾರ ಮುಂಬೈ ಆಶ್ರಯದಲ್ಲಿ ಹೆಲ್ಪ್ ಎ ಚೈಲ್ಡ್ ಟು ಸ್ಟಡಿ ಯೋಜನೆಯ ಶಿಷ್ಯವೇತನ ವಿತರಣಾ ಸಮಾರಂಭದ ಅಧ್ಯಕ್ಷತೆವಹಿಸಿ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಚೆಕ್ ಮತ್ತು ಲ್ಯಾಪ್‌ಟಾಪ್, ಪಠ್ಯಪುಸ್ತಕಗಳನ್ನು ವಿತರಿಸಿ ಮಾತನಾಡಿದರು.

ಕಾರ್ಖಾನೆಯ ಮಾಲೀಕರಾದ ಸಮೀರಭಾಯಿ ಸೋಮೈಯಾ ಹಾಗೂ ಅಮೃತಾಬಾಬಿ ಸೋಮೈಯಾ ಅವರಿಗೆ ಶಿಷ್ಯವೇತನ ಕಾರ್ಯಕ್ರಮವು ಒಂದು ಸಾಮಾಜಿಕ ಕಾರ್ಯ ಮಾತ್ರವಾಗಿರದೇ ಅವರ ಹೃದಯಕ್ಕೆ ಹತ್ತಿರವಾದ ಸೇವಾಕಾರ್ಯವಾಗಿದೆ. ಅವರು ಕಾರ್ಖಾನೆಗೆ ಭೇಟಿಕೊಟ್ಟಾಗ ಮೊದಲು ಭೇಟಿಯಾಗುವದೇ ಕೆ.ಜ.ಸೋಮೈಯಾ ಶಾಲೆಗೆ. ಗೋದಾವರಿ ಕಾರ್ಖಾನೆಯಿಂದ ಈ ಭಾಗದ ರೈತರ ಆರ್ಥಿಕಾಭಿವೃದ್ದಿ, ಕಾರ್ಮಿಕರಿಗೆ ಉದ್ಯೋಗವಕಾಶದ ಜೊತೆಗೆ ಬಡವಿದ್ಯಾರ್ಥಿಗಳ ಶೈಕ್ಷಣೀಕ ಪ್ರಗತಿಗಾಗಿ ಪ್ರತಿವರ್ಷ ನೂರಾರು ವಿದ್ಯಾರ್ಥಿಗಳಿಗೆ ಶಿಷ್ಯವೇತನ ವಿತರಿಸಲಾಗುತ್ತಿದೆ. ಶಿಷ್ಯವೇತನ ಪಡೆದ ವಿದ್ಯಾರ್ಥಿಗಳು ಯೋಜನೆಯ ಸದುಪಯೋಗ ಪಡೆದು, ಸಮಾಜದಲ್ಲಿ ಉತ್ತಮ ನಾಗರೀಕರಾಗಿ ಬೆಳೆದು, ತಾವು ಮರಳಿ ಈ ಯೋಜನೆಯ ಮೂಲಕ ಇನ್ನಷ್ಟು ವಿದ್ಯಾರ್ಥಿಗಳಿಗೆ ಸಹಾಯ ಮಾಡುವ ವ್ಯಕ್ತಿಗಳಾಗಿ ಬೆಳೆದಾಗ ಮಾತ್ರ, ಈ ಯೋಜನೆಯು ಸಾರ್ಥಕವಾಗಿ ಇನ್ನಷ್ಟು ಬಡ ವಿದ್ಯಾರ್ಥಿಗಳ ಬಾಳಲ್ಲಿ ವಿದ್ಯೆಯ ಬೆಳಕು ನೀಡಲು ಸಾಧ್ಯವಾಗುತ್ತದೆ ಎಂದರು.

ಹೆಲ್ಪ್ ಎ ಚೈಲ್ಡ್ ಟು ಸ್ಟಡಿ ಯೋಜನೆಯ ಮುಖ್ಯಸ್ಥ ಡಾ.ವಿಜಯಕುಮಾರ ಕಣವಿ ಮಾತನಾಡಿ ನಮ್ಮ ಕಾರ್ಖಾನೆಯಿಂದ ಶಿಷ್ಯವೇತನಕ್ಕಾಗಿ 2001 ರಿಂದ 2024ರವರೆಗೆ ಎಸೆಸೆಲ್ಸಿಯಿಂದ ಉನ್ನತ ಶಿಕ್ಷಣವರೆಗಿನ ಮುಂದಿನ ಎಲ್ಲ ವಿಭಾಗಗಳ ಸುಮಾರು ಸುಮಾರು 11,554 ಸಾವಿರ ಜಾಣ ಮತ್ತು ಬಡ ವಿದ್ಯಾರ್ಥಿಗಳಿಗೆ ಸುಮಾರು 8 ಕೋಟಿರೂಗಳ ಶಿಷ್ಯವೇತನ ವಿತರಿಸಲಾಗಿದೆ.. ನಮ್ಮ ಕಾರ್ಖಾನೆಯ ಸುತ್ತಲಿನ 50ಕೀಮಿ ವ್ಯಾಪ್ತಿಯ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿ, ವಿದ್ಯಾರ್ಥಿಗಳ ಮನೆಗೆ ಭೇಟಿ ನೀಡಿ, ಬಡ ಮತ್ತು ಪ್ರತಿಭೆಯುಳ್ಳ ವಿಧ್ಯಾರ್ಥಿಗನ್ನು ಪಾರದರ್ಶಕವಗಿ ಆಯ್ಕೆ ಮಾಡಿ ಶಿಷ್ಯವೇತನ ನೀಡುತ್ತಿದ್ದೇವೆ. ನಮ್ಮ ಶಿಷ್ಯ ವೇತನ ಪಡೆದ ವಿದ್ಯಾರ್ಥಿಗಳಲ್ಲಿ ಶೇ.50ಕ್ಕೂ ಅಧಿಕ ವಿದ್ಯಾರ್ಥಿಗಳು ವೈದ್ಯರು, ಇಂಜಿನಿಯರ್, ಆರ್ಮಿ, ಅಂಚೆ ಇಲಾಖೆ, ಪೊಲೀಸ್ ಮತ್ತು ಶಿಕ್ಷಣ ಇಲಾಖೆ ಸೇರೆದಂತೆ ವಿವಿಧ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಎಂದರು.

ಮೆಡಿಕಲ್ ಮತ್ತು ಇಂಜಿನಿಯರಿಂಗ್ ಓದುತ್ತಿರುವ ಚೇತನ ಮಂಟೂರ, ಸುಪ್ರಾ ಹಳಿಂಗಳಿ, ಐಶ್ವರ್ಯಾ ಹೂಗಾರ, ಪವಿತ್ರಾ ಕೋರಿ ಅವರಿಗೆ ತಲಾ 1.60 ಲಕ್ಷ ರೂಗಳ ಚೆಕ್ ವಿತರಿಸಲಾಯಿತು. ಪ್ರಸಕ್ತ ವರ್ಷ 662 ವಿದ್ಯಾರ್ಥಿಗಳಿಗೆ ಒಟ್ಟು 54.41.316 ಲಕ್ಷ ಶಿಷ್ಯವೇತನ ಚೆಕ್‌ಗಳು, ಲ್ಯಾಪ್‌ಟಾಪ್ ಮತ್ತು ಪಠ್ಯಪುಸ್ತಕಗಳನ್ನು ವಿತರಿಸಲಾಯಿತು.

ಗಣ್ಯರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಶಿಷ್ಯವೇತನ ಫಲಾನುಭವಿಗಳಾದ ಚಂದ್ರಿಕಾ ನ್ಯಾಮಗೌಡ, ಬಂದವ್ವ ಮೂಗಳಖೋಡ, ಚೇತನ ಕಪ್ಪಲಗುದ್ದಿ ಯೋಜನೆಯಿಂದ ತಮ್ಮ ಶೈಕ್ಷಣೀಕ ಜೀವನಕ್ಕೆ ದಾರಿಯಾದ ಅನುಭವಗಳನ್ನು ಹಂಚಿಕೊಂಡರು.

ಕಾರ್ಯನಿರ್ವಾಹಕ ನಿರ್ದೇಶಕ ಬಿ.ಆರ್.ಭಕ್ಷಿ, ಮೇಕ್ಯಾನಿಕ್ ವಿಭಾಗದ ಮುಖ್ಯಸ್ಥರಾದ ವ್ಹಿ.ಕೆ.ಕಿಲಾರಿ, ವಿವಿಧ ವಿಭಾಗದ ಅಧಿಕಾರಿಗಳಾದ, ಮಹ್ಮದ ಚಾವೂಸ್, ಡಾ.ಆರ್.ಎಸ್.ಶೆಟ್ಟರ, ಸೋಮಶೇಖರ ಪೇಟಿಮನಿ, ಕೃಷ್ಣಾ ಗೌಡರ, ರಾಮಚಂದ್ರ ಸೋನವಾಲ್ಕರ್, ಆನಂದ ಕೊಟಬಾಗಿ, ಡಾ.ರಮೇಶ ಶೆಟ್ಟರ್ ಹಾಗೂ ಸೋಮೈಯಾ ಶಿಷ್ಯವೇತನ ಸಹಾಯಕರಾದ ಸಂಜು ಬ್ಯಾಳಿ, ಸ್ವಾತಿ ಜಾಧವ, ರೇಖಾ ಮಠಪತಿ ಇದ್ದರು. ಡಾ.ವಿಜಯಕುಮಾರ ಕಣವಿ ನಿರೂಪಿಸಿ-ವಂದಿಸಿದರು.

# ಆದರ್ಶ ಸಮಾಜದ ನಿರ್ಮಾಣ ನಮ್ಮೆಲ್ಲರ ಏಕೈಕ ಗುರಿ

**ರಬಕವಿ-ಬನಹಟ್ಟಿ:** ಬದುಕು ಬಂಗಾರವಾಗಬೇಕಾದರೆ ಅದಕ್ಕೆ ಸಾಹಿತ್ಯಿಕ ಸ್ಪರ್ಶ ಬೇಕು. 'ನನ್ನ ಜೀವನವೇ ನನ್ನ ಸಂದೇಶ' ಎಂದು ಸಾರಿದ ಮಹಾತ್ಮರ ವಿಚಾರಧಾರೆಯನ್ನು ಅರಿತುಕೊಳ್ಳಬೇಕು. ನಡೆ ನುಡಿಗಳನ್ನು ಒಂದಾಗಿಸಿ ಬದುಕಿದ ಶರಣರ, ದಾಸರ, ಜೀವನ ನಮಗೆ ಆದರ್ಶವಾಗಿದೆ. ಅವರ ನಡೆನುಡಿಗಳಾದ ಕಾಯಕವೇ ಕೈಲಾಸ, ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ, ನುಡಿದರೆ ಮುತ್ತಿನ ಹಾರದಂತಿರಬೇಕು, ಆಚಾರವೇ ಸ್ವರ್ಗ ಅನಾಚಾರವೇ ನರಕ ಇಂಥ ಮಾತುಗಳು ನಮ್ಮ ಜೀವನಕ್ಕೆ ದಾರಿ ದೀಪವಾಗಬೇಕು ಎಂದು ರಬಕವಿ ಬನಹಟ್ಟಿ ಎರಡನೆಯ ಮಕ್ಕಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆ ಕುಮಾರಿ ಸುಹಾನಿ ಗಿರೀಶ ಮುತ್ತೂರ ಕರೆ ನೀಡಿದರು.

ಅವರು ಶನಿವಾರ ರಾಮಪುರದ ಪೂರ್ಣಪ್ರಜ್ಞ ಶಿಕ್ಷಣ ಸಂಸ್ಥೆಯ ಸಭಾಭವನದಲ್ಲಿ ಜರುಗಿದ ಎರಡನೆಯ ಮಕ್ಕಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಮಾತುಗಳನ್ನಾಡಿದರು.

ಮಕ್ಕಳಲ್ಲಿ ಸೃಜನಶೀಲತೆ, ಬರವಣಿಗೆ, ಸಾಹಿತ್ಯದ ಅಭಿರುಚಿ, ನಾಡು ನುಡಿ, ನೆಲ, ಜಲ, ಸಂಸ್ಕೃತಿಯ ಹಿತ ಚಿಂತನೆ, ಪರಿಸರ ಪ್ರಜ್ಞೆ ಇಂಥಹ ಹಲವಾರು ಮೌಲ್ಯಗಳನ್ನು ಮೂಡಿಸುವ ದಿಶೆಯಲ್ಲಿ ಸಾಹಿತ್ಯ ಪರಿಷತ್ತುಗಳು ಕಾರ್ಯ ಮಾಡಬೇಕು. ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದುಕೊಂಡು ಕನ್ನಡ ಭಾಷೆ ಅತ್ಯಂತ ಶ್ರೀಮಂತವಾದ, ಪ್ರಾಚೀನ ಭಾಷೆಯಾಗಿದೆ. ಸಾಹಿತ್ಯದಿಂದಲೇ ಸಂಸ್ಕೃತಿ, ಸಮೃದ್ಧಿ, ಆರೋಗ್ಯಕರ ಸಮಾಜ ನಿರ್ಮಾಣ ಮಾಡಲು ಸಾಧ್ಯ. ಸಾಹಿತ್ಯದಿಂದಲೇ ಆದರ್ಶ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ಸುಹಾನಿ ಗಿರೀಶ ಮುತ್ತೂರ ತಿಳಿಸಿದರು.

# ಸಚಿವರ ಕಣ್ಣಿಗೆ ಬಿದ್ದ ನಿರ್ಗತಿಕ ಕುಟುಂಬ

## ನೆರವು ನೀಡಿ ಮಾನವೀಯತೆ ತೋರಿದ ಲಕ್ಷ್ಮೀ ಹೆಬ್ಬಾಳಕರ್

**ಬೆಳಗಾವಿ :** ಮಹಿಳಾ ವಿಶ್ವವಿದ್ಯಾಲಯದ ಕಾರ್ಯಕ್ರಮದ ನಿಮಿತ್ಯ ಬುಧವಾರ ವಿಜಯಪುರಕ್ಕೆ ಆಗಮಿಸಿದ್ದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಬೆಳಗಾವಿಗೆ ವಾಪಸ್ ಆಗುವಾಗ ಆಕಸ್ಮಾತಾಗಿ ಕಣ್ಣಿಗೆ ಕಾಣಿಸಿದ ನಿರ್ಗತಿಕ ಕುಟುಂಬವೊಂದಕ್ಕೆ ನೆರವು ನೀಡುವ ಮೂಲಕ ಮಾನವೀಯತೆ ತೋರಿಸಿದ್ದಾರೆ.



ಕಾರ್ಯಕ್ರಮ ಮುಗಿಸಿ ಮರಳುವಾಗ ವಿಜಯಪುರ – ಬಾಗಲಕೋಟೆ ಹೆದ್ದಾರಿಯ ಪಕ್ಕ ಹನಗನಹಳ್ಳಿ ಎಂಬಲ್ಲಿ ರಸ್ತೆ ಪಕ್ಕದಲ್ಲಿ ಊಟಕ್ಕೆಂದು ಸಚಿವರು ವಾಹನ ನಿಲ್ಲಿಸಿದರು. ಊಟ ಮಾಡುವಾಗ ಪಕ್ಕದಲ್ಲಿದ್ದ ಸಣ್ಣ ಮನೆಯ ಮುಂದೆ ಅಜ್ಜಿಯೊಬ್ಬಳು ಬಾಟಲಿಗಳಲ್ಲಿ ನೀರು ತುಂಬಿಸಿ ಮನೆಯ ಮುಂದೆ ಇಡುತ್ತಿದ್ದಳು. ಆ ಬಗ್ಗೆ ವಿಚಾರಿಸಿದಾಗ ರಸ್ತೆಯಲ್ಲಿ ಹೋಗುವ ಜನರು ನೀರು ಕುಡಿಯಲು ಬರುತ್ತಾರೆ. ಅವರಿಗೆ ಸಹಾಯವಾಗಲೆಂದು ಬಾಟಲಿಗಳಲ್ಲಿ ತುಂಬಿ ಇಡುವುದಾಗಿ ತಿಳಿಸಿದಳು.

ಹಾಗೆ ಮಾತನಾಡುತ್ತ ಗೌರಮ್ಮ ವಾಡೇದ ಎಂಬ ಆ ಅಜ್ಜಿ ಹಾಗೂ ಜೊತೆಗಿದ್ದ ಮಲ್ಲು ಎನ್ನುವ ಹೆಸರಿನ ಅವಳ ಮಗನ ಕುರಿತು ವಿಚಾರಿಸಿದಾಗ, ಅವರು ಹಳ್ಳಿಯಲ್ಲಿ ಹೊಂದಿದ್ದ ಮನೆಯ ಜಾಗ ರಸ್ತೆ ಮಾಡುವಾಗ ಕೈ ತಪ್ಪಿದೆ. ಇದರಿಂದಾಗಿ ವಾಸಿಸಲು ಮನೆಯೇ ಇರಲಿಲ್ಲ. ನಂತರ ಈ ಸ್ಥಳದಲ್ಲಿದ್ದ ತೋಟದ ಮಾಲಕರು ಒಂದೇ ಕೊಠಡಿಯ ಮನೆಯಲ್ಲಿ ವಾಸಿಸಲು ಅವಕಾಶ ನೀಡಿದರು. ಆದರೆ ಅಡುಗೆ ಮಾಡಲು ಪಾತ್ರೆಗಳಾಗಲಿ, ಹಾಸಿಗೆ– ಹೊದಿಕೆಗಳಾಗಲಿ, ಕಾಳು ಕಡಿಗಳಾಗಲಿ ಏನೂ ಇಲ್ಲದೆ ಊಟಕ್ಕೂ ಸರಿಯಾಗಿ ಗತಿ ಇಲ್ಲ ಎನ್ನುವ ಅಂಶ ಗೊತ್ತಾಯಿತು. ಅವರು ಈ ಮೊದಲು ಹೊಂದಿದ್ದ ಪಡಿತರ ಕಾರ್ಡ್ ಕೂಡ ಕಳೆದುಹೋಗಿದ್ದರಿಂದ ಸರಕಾರದಿಂದ ಯಾವುದೇ ಸೌಲಭ್ಯ ಸಿಗುತ್ತಿಲ್ಲ ಎನ್ನುವುದು ಕೂಡ ತಿಳಿಯಿತು.

ಕೂಡಲೇ ಸಚಿವರು ಸ್ವಲ್ಪಮಟ್ಟಿಗೆ ಆರ್ಥಿಕ ನೆರವು ನೀಡಿದರಲ್ಲದೆ, ಆದಷ್ಟು ಶೀಘ್ರ ರೇಶನ್ ಕಾರ್ಡ್ ಮತ್ತು ಗೃಹಲಕ್ಷ್ಮೀ ಯೋಜನೆಯ ಹಣ ಬರುವಂತೆ ಮಾಡುವುದಾಗಿ ತಿಳಿಸಿ, ಸ್ಥಳದಿಂದಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನೆರವು ನೀಡಿದ ಪೊಲೀಸ್ ಅಧಿಕಾರಿ

ಇದೇ ವೇಳೆ ಅದೇ ಮಾರ್ಗವಾಗಿ ತೆರಳುತ್ತಿದ್ದ ಎಎಸ್ಐ ಎಚ್.ಎಸ್.ಗೌಡರ್ ಸಚಿವರ ಬಳಿ ಆಗಮಿಸಿ, ಅಜ್ಜಿಯ ಕುಟುಂಬದ ಪರಿಸ್ಥಿತಿ ವಿವರಿಸಿದರು. ಆಗ ಅಜ್ಜಿ, ತಾವು ಉಪವಾಸವಿದ್ದ ಸಂದರ್ಭದಲ್ಲಿ ಎಎಸ್ಐ ತಮಗೆ ಅಕ್ಕಿ ನೀಡಿ ನೆರವು ನೀಡಿದ್ದಾರೆ ಎಂದು ಸಚಿವರಿಗೆ ತಿಳಿಸಿದಳು. ಇದನ್ನು ತಿಳಿದ ಸಚಿವರು, ಸಂಕಷ್ಟದಲ್ಲಿದ್ದವರಿಗೆ ನೆರವು ನೀಡಿದ್ದಕ್ಕಾಗಿ ಸರಕಾರದ ಪರವಾಗಿ ಎಎಸ್ಐ ಗೌಡರ್ ಗೆ ಧನ್ಯವಾದ ತಿಳಿಸಿದರು.

ಈ ವೇಳೆ ಮಾತನಾಡಿದ ಸಚಿವೆ ಲಕ್ಷ್ಮೀ ಹೆಬ್ಬಾಳಕರ್, ಇಂತವರಿಗಾಗಿಯೇ ಸರಕಾರ ಗೃಹಲಕ್ಷ್ಮೀ, ಅನ್ನಭಾಗ್ಯ ಸೇರಿದಂತೆ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ಮುಖ್ಯಮಂತ್ರಿಗಳು ಬಡವರಿಗಾಗಿಯೇ ಯೋಜನೆಗಳನ್ನು ತಂದಿದ್ದಾರೆ. ಅದು ಯಾರಿಗೆ ತಲುಪಿಲ್ಲವೋ ಅಂತವರಿಗೆ ತಲುಪಿಸುವುದು ನಮ್ಮ ಕರ್ತವ್ಯ. ಆ ಕೆಲಸವನ್ನು ಶೀಘ್ರದಲ್ಲೇ ಮಾಡಲಾಗುವುದು. ಎಎಸ್ಐ ಗೌಡರ್ ಮನುಷ್ಯತ್ವ ತೋರಿಸಿ ಅಜ್ಜಿಯ ಕುಟುಂಬಕ್ಕೆ ನೆರವು ನೀಡಿದ್ದಾರೆ. ಅವರ ಕಾರ್ಯ ಸ್ತುತ್ಯಾರ್ಹ. ಸರಕಾರದಿಂದ ಆ ಕುಟುಂಬಕ್ಕೆ ಎಲ್ಲ ನೆರವು ಸಿಗುವಂತೆ ಮಾಡುತ್ತೇನೆ ಎಂದು ತಿಳಿಸಿದರು.

ತಮ್ಮ ಅವಸರದ ಪ್ರವಾಸದ ಮಧ್ಯೆಯೂ ಸಚಿವರು ಸಮಯ ನೀಡಿ ಇಂತಹ ನಿರ್ಗತಿಕ ಕುಟುಂಬಕ್ಕೆ ನೆರವು ನೀಡಲು ಮುಂದಾಗಿರುವುದು ಎಲ್ಲರ ಪ್ರಶಂಸೆಗೆ ಕಾರಣವಾಗಿದೆ.

# ದೇವಸ್ಥಾನದ ಕಾಂಕ್ರೀಟ್ ಕಾಮಗಾರಿಗೆ ಪೂಜೆ ಸಲ್ಲಿಸಿದ ಚನ್ನರಾಜ ಹಟ್ಟಿಹೊಳಿ



**ಬೆಳಗಾವಿ :** ಬೆಳಗಾವಿ ಗ್ರಾಮೀಣ ಕ್ಷೇತ್ರದ ಸಹ್ಯಾದ್ರಿ ನಗರದಲ್ಲಿರುವ ಶ್ರೀ ಮಹಾಬಳೇಶ್ವರ ದೇವಸ್ಥಾನದ ಮೇಲ್ಛಾವಣಿಗೆ ಕಾಂಕ್ರೀಟ್ ಹಾಕುವ ಕಾಮಗಾರಿಗೆ (ಸ್ಲ್ಯಾಬ್) ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಗುರುವಾರ ಪೂಜೆ ನೆರವೇರಿಸಿ, ಚಾಲನೆ ನೀಡಿದರು.

ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರ ವಿಶೇಷ ಕಾಳಜಿ ಹಾಗೂ ಅವರ ಅನುದಾನದಡಿ ದೇವಸ್ಥಾನ ಜೀರ್ಣೋದ್ಧಾರಗೊಳ್ಳಲಿದ್ದು, ಸ್ಥಳೀಯ ನಿವಾಸಿಗಳ ಸಲಹೆ ಸೂಚನೆ ಪಡೆದು, ಕಾಮಗಾರಿಯನ್ನು ಆದಷ್ಟು ಬೇಗ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಚನ್ನರಾಜ ಹಟ್ಟಿಹೊಳಿ ಸೂಚಿಸಿದರು.

ಈ ವೇಳೆ ಸುರೇಶ ಜಾಡಗಿ, ಮಠಪತಿ, ಪ್ರಭಾಕರ ಮತ್ತಿಕಟ್ಟಿ, ವಿವೇಕ ಹಿರೇಮಠ, ಮನೋಹರ ಸದಲಗಿ, ಕೃಷ್ಣ ಕೊನೇರಿ ಸೇರಿದಂತೆ ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು.

# ನಮ್ಮ ಮಾತೃಭಾಷೆ ಕನ್ನಡವನ್ನು ಉಳಿಸಿ ಬೆಳೆಸಬೇಕು: ಶಿವಶಂಕರ ಹಂಜಿ

**ಅಥಣಿ :** ನಮ್ಮ ಮಾತೃಭಾಷೆಯನ್ನು ಉಳಿಸಿ ಬೆಳೆಸುವಲ್ಲಿ, ಕನ್ನಡಿಗರಿಗೆ ಅನ್ಯಾಯವಾದಾಗ ಬೀದಿಗಿಳಿದು ಹೋರಾಟ ಮಾಡುವ ಮೂಲಕ ನ್ಯಾಯ ಒದಗಿಸುತ್ತಿರುವ ಕರ್ನಾಟಕ ರಕ್ಷಣಾ ವೇದಿಕೆ ಮುತ್ತು ಇನ್ನಿತರ ಕನ್ನಡಪರ ಸಂಘಟನೆಗಳ ಕಾರ್ಯ ಶ್ಲಾಘನೀಯ ಎಂದು ಶಿಕ್ಷಣಪ್ರೇಮಿ ಹಾಗೂ ಅಥಣಿ ವಿದ್ಯಾ ವರ್ಧಕ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶಿವಶಂಕರ ಹಂಜಿ ಹೇಳಿದರು.

ಅವರು ರವಿವಾರ ಅಥಣಿ ಪಟ್ಟಣದ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯಲ್ಲಿ ಎಚ್ ಶಿವರಾಮೇಗೌಡರ ಕರ್ನಾಟಕ ರಕ್ಷಣಾ ವೇದಿಕೆ, ತಾಲೂಕ ಘಟಕದ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ಶುದ್ಧ ಕನ್ನಡ ಭಾಷಣ ಸ್ಪರ್ಧೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಇಂಗ್ಲಿಷ್ ಭಾಷೆಯ ವ್ಯಾಮೋಹ ಹೆಚ್ಚಾಗುತ್ತಿರುವ ಇಂದಿನ ದಿನಮಾನಗಳಲ್ಲಿ ನಮ್ಮ ಮಾತೃಭಾಷೆ ಕನ್ನಡವನ್ನು ಉಳಿಸಿ ಬೆಳೆಸಬೇಕು. ಸುಮಾರು 2 ಸಾವಿರ ವರ್ಷಗಳ ಇತಿಹಾಸ ಹೊಂದಿರುವ ನಮ್ಮ ಕನ್ನಡ ಭಾಷೆ ದೇಶ ವಿದೇಶಗಳಲ್ಲಿಯೂ ಬೆಳವಣಿಗೆ ಹೊಂದಿದೆ. ನಾನು ಇತ್ತೀಚಿಗೆ ಆಸ್ಟ್ರೇಲಿಯಾ ದೇಶಕ್ಕೆ ಹೋದಾಗ ಅಲ್ಲಿನ ಶಾಲೆಯೊಂದರಲ್ಲಿ ಜ್ಞಾನ ದೇಗುಲವಿದು ಕೈ ಮುಗಿದು ಒಳಗೆ ಬಾ ಎಂಬ ಕನ್ನಡ ನಾಮಫಲಕ ಹಾಕಿರುವುದನ್ನು ಕಂಡು ವಿದೇಶದಲ್ಲಿಯೂ ನಮ್ಮ ಭಾಷೆ ಇರುವುದನ್ನು ನೋಡಿ ನನಗೆ



ಬಹಳಷ್ಟು ಹೆಮ್ಮೆ ಮತ್ತು ಖುಷಿ ಎನಿಸಿತು. ವಿಶ್ವ ವ್ಯಾಪಿಯಾಗಿರುವ ನಮ್ಮ ಕನ್ನಡ ಭಾಷೆಯನ್ನು ನಮ್ಮ ಮಕ್ಕಳಿಗೆ ಕಲಿಸಿಕೊಟ್ಟಾಗ ಕನ್ನಡ ಉಳಿಸಿ ಬೆಳೆಸಲು ಸಾಧ್ಯವಿದೆ. ನಿತ್ಯ ಮನೆಯಲ್ಲಿ ಕನ್ನಡವನ್ನು ಬಳಸುವಂತಾಗಬೇಕು. ಇದು ನಮ್ಮ ಅನ್ನದ ಭಾಷೆ, ನಮ್ಮ ಬದುಕಿನ ಭಾಷೆ ಎಂದುಜನ್ಮನೀಡಿದತಾಯಿಯನ್ನಪ್ರೀತಿಸಿದಂತೆ ನಮ್ಮ ಮಾತೃಭಾಷೆಯನ್ನು ಪ್ರತಿಯೊಬ್ಬರು ಪ್ರೀತಿಸಬೇಕು. ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತರು ಹೋರಾಟದ ಜೊತೆಗೆ ಗಡಿಭಾಗದಲ್ಲಿ ಕನ್ನಡವನ್ನ ಇನ್ನಷ್ಟು ಗಟ್ಟಿಯಾಗಿ ಕಟ್ಟುವ ನಿಟ್ಟಿನಲ್ಲಿ ಶಾಲಾ ಮಕ್ಕಳಿಗೆ ಇಂತಹ ಕಾರ್ಯಕ್ರಮ ಆಯೋಜಿಸಿರುವುದು ಒಳ್ಳೆಯ ಬೆಳವಣಿಗೆಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಣ್ಣಾಸಾಹೇಬ ತೆಲಸಂಗ ಮಾತನಾಡಿ ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ನಮ್ಮ ಭಾಷೆ ವಿಶ್ವದಲ್ಲಿಯೇ ಶ್ರೀಮಂತವಾಗಿದೆ. ಸ್ವಾಭಿಮಾನದಿಂದ ನಾವೆಲ್ಲರೂಮಾತೃಭಾಷೆಯನ್ನುನಿತ್ಯಬಳಸುವ ಮೂಲಕ ಉಳಿಸಬೇಕು. ಗಡಿ ಭಾಗದಲ್ಲಿ ಇಂದು ಕನ್ನಡ ಶಾಲೆಗಳು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿ ಮುಚ್ಚುವ ಸ್ಥಿತಿಯಲ್ಲಿವೆ. ಸರ್ಕಾರ ಅವುಗಳನ್ನು ಪುನಃ ಚೇತನ ಗೊಳಿಸುವ ಕನ್ನಡ ಶಾಲೆಗಳನ್ನು ಉಳಿಸಬೇಕು.ಕರ್ನಾಟಕರಕ್ಷಣಾವೇದಿಕೆಯಿಂದ ಶುದ್ಧ ಕನ್ನಡ ಭಾಷಣ ಸ್ಪರ್ಧೆಯನ್ನು ಪ್ರಾಥಮಿಕ ವಿಭಾಗ , ಪ್ರೌಢಶಾಲಾ ವಿಭಾಗ , ಕಾಲೇಜು ವಿಭಾಗ ಎಂಬ ಮೂರು ಹಂತಗಳಲ್ಲಿ ನಡೆಸಲಾಗುತ್ತಿದೆ. ಪ್ರಾಯೋಜಕರಿಂದ ನಗದು ಬಹುಮಾನ ನೀಡಲಾಗುತ್ತಿದ್ದು, ಬರುವ ಡಿಸೆಂಬರ್ 7 ರಂದು ನಡೆಯುವ ಗಡಿನಾಡು ಕನ್ನಡ ಉತ್ಸವ ಸಮಾರಂಭದಲ್ಲಿ ಸ್ಪರ್ಧೆಯ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಗುವುದು ಎಂದು ಹೇಳಿದರು.

# ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕೃತ ಅಮೀರ್ ಹಮ್ಜಾ ನದಾಫ್‌ಗೆ ಸನ್ಮಾನ

**ಕೊಪ್ಪಳ :** ನಗರದ ಸರದಾರದಲ್ಲಿ ಪಂಚ್ ಕಮಿಟಿ ವತಿಯಿಂದ ಹಜರತ್ ಮಹಬೂಬ ಸುಭಾನಿ ಗ್ಯಾರವಿ ಹಬ್ಬದ ಪ್ರಯುಕ್ತ ಪ್ರತಿ ವರ್ಷದಂತೆ ಈ ವರ್ಷವೂ ಸಹ ಜರುಗಿದ 12 ಜೋಡಿಗಳ ಸಾಮೂಹಿಕ ವಿವಾಹ ನಿಖಾ ಕಾರ್ಯಕ್ರಮದಲ್ಲಿ ನಗರದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ವೃತ್ತಿ ಶಿಕ್ಷಕರಾಗಿ ಅತ್ಯುತ್ತಮ ಸೇವೆ ಸಲ್ಲಿಸಿ ನಿವೃತ್ತಗೊಂಡ ಪ್ರಶಸ್ತಿ ಪುರಸ್ಕೃತ ನಿವೃತ್ತ ವೃತ್ತಿ ಶಿಕ್ಷಕ ಅಮೀರ್ ಹಮ್ಜಾ ನದಾಫ್ ರವರಿಗೆ ಮುಸ್ಲಿಂ ಪಂಚ್ ಕಮಿಟಿ ಪರವಾಗಿ ಸನ್ಮಾನಿಸಿ ಅಭಿನಂದಿಸಲಾಯಿತು,

ಸದರಿಯವರು ವೃತ್ತಿ ಶಿಕ್ಷಣ ಕ್ಷೇತ್ರ ಸಾಮಾಜಿಕ ಕ್ಷೇತ್ರ ದಲ್ಲಿನ ಉತ್ತಮ ಸೇವೆ ಗಾಗಿ ಇವರಿಗೆ ವಿವಿಧ ಪ್ರಶಸ್ತಿ ಲಭಿಸಿರುವುದು ನಮ್ಮೆಲ್ಲರಿಗೆ ಹರ್ಷ ಉಂಟು ಮಾಡಿದೆ ಎಂದು ಕಾಲೇಜಿನ ಉಪ ಪರಾಚಾರ್ಯರಾದ ಎಂಎ ಖಯ್ಯುಮ್ ಮತ್ತು ಸಹ ಶಿಕ್ಷಕರ ಬಳಗ ದವರು ಹರ್ಷ ವ್ಯಕ್ತಪಡಿಸಿ ಮುಂಬರುವ ದಿನಗಳಲ್ಲಿ ಇವರಿಗೆ ಇನ್ನೂ ಉತ್ತಮ ಮಟ್ಟದ ಪ್ರಶಸ್ತಿಗಳು



ಲಭಿಸಲಿ ಎಂದು ಶುಭ ಹಾರೈಸಲಾಯಿತು,

ಈ ಸಂದರ್ಭದಲ್ಲಿ ಮುಸ್ಲಿಂ ಪಂಚ್ ಕಮಿಟಿ ಅಧ್ಯಕ್ಷರಾದ ಖಾದರ್ ಸಾಬ್ ಕುದುರೆಮೋತಿ ಗೌರವಾಧ್ಯಕ್ಷರಾದ ಶಾಬೂದ್ದೀನ್ ಸಾಬ್ ನೂರ್ ಭಾಷಾ ಕಾರ್ಯದರ್ಶಿ ಎಮ್ ಪಾಶಾ ಮಾನ್ವಿ ಮುಸ್ತಫ ಕುದುರೆಮೋತಿ ಗೌಸ ಸಾಬ್ ಸರ್ದಾರ್, ಕರ್ನಾಟಕ ರಾಜ್ಯ ನದಾಫ್ ಪಿಂಜಾರ್ ಸಂಘದ ಪದಾಧಿಕಾರಿಗಳು ವಿವಿಧ ಜಿಲ್ಲೆಗಳ ಮುಖ್ಯಸ್ಥರು ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು ಸಂಘಟನೆಗಳ ಪದಾಧಿಕಾರಿಗಳು ಕಾರ್ಯಕರ್ತರು ಮತ್ತು ಅಭಿಮಾನಿಗಳು ಪಾಲ್ಗೊಂಡಿದ್ದರು.

# ಅಭ್ಯರ್ಥಿಯ ಗೆಲವು ಕಾರ್ಯಕರ್ತರ ಗೆಲವು: ಡಾ. ಬಸವರಾಜ್ ಕ್ಯಾವಟರ್ ಸಂತಸ

**ಕೊಪ್ಪಳ :** ಜನರು ಮೂಲ ಸೌಕರ್ಯದಿಂದವಂಚಿತರಾಗಿದ್ದಾರೆ. ಧೂಳು ಮುಕ್ತ ನಗರ ಮಾಡಲು ಆಡಳಿತದ ವೈಫಲ್ಯತೆ ಎದ್ದು ಕಾಣುತ್ತಿದೆ. ನಗರಸಭೆಯ ಅಧ್ಯಕ್ಷರು ಮತ್ತು ಶಾಸಕರು, ಸಂಸದರ ಆಡಳಿತಕ್ಕೆ ಬೇಸತ್ತು ಕೊಪ್ಪಳದ ಜನರು ಬದಲಾವಣೆಯನ್ನು ತರಲು ಬಯುಸುತ್ತಿದ್ದಾರೆ ಎನ್ನುವುದಕ್ಕೆ ನಗರಸಭೆಯಉಪಚುನಾವಣೆಯಲ್ಲಿ 8 ನೇ ವಾರ್ಡ್ ನಲ್ಲಿ ಜನರು ಬಿಜೆಪಿ ಅಭ್ಯರ್ಥಿ ಬೆಂಬಲಿಸಿರುವುದು ಸಾಕ್ಷಿಯಾಗಿದೆ ಎಂದು ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ವೈದ್ಯ ಬಸವರಾಜ ಕ್ಯಾವಟರ್ ಬಣ್ಣಿಸಿದ್ದಾರೆ.



ಈ ಕುರಿತು ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿರುವ ಅವರು, ಕೊಪ್ಪಳ ನಗರಸಭೆಯ 8ನೇ ವಾರ್ಡ್ ಉಪಚುನಾವಣೆಯಲ್ಲಿ ವಿಜಯ ಸಾಧಿಸಿದ ಬಿಜೆಪಿ ಅಭ್ಯರ್ಥಿಯಾದ ಶ್ರೀಮತಿ ಕವಿತಾ ಬಸವರಾಜ ಗಾಳಿ ಅವರಿಗೆ ಮತ್ತು ಮತದಾರರಿಗೂ ಧನ್ಯವಾದಗಳು ಹಾಗೂ ಅಭಿನಂದನೆಗಳು.

ನಗರದಲ್ಲಿ ಎಂಟನೇ ವಾರ್ಡಿನ ಪ್ರಚಾರಕ್ಕೆ ತೆರಳಿದ ಸಂದರ್ಭದಲ್ಲಿ ಮಹಿಳೆಯರು ಸಾಕಷ್ಟು ಮೂಲಭೂತ ಸೌಕರ್ಯ ವಂಚಿತರಾಗಿದ್ದಾರೆ ಎಂದು ಜನರೆ ನಮಗೆ ತಿಳಿಸಿದರು ಹಾಗೂ ಸಾರ್ವಜನಿಕ ಶೌಚಾಲಯದ ಸ್ಥಿತಿಗತಿಯನ್ನು ತಿಳಿಸಿದ್ದು ಕಂಡರೆ ನಗರದ ಜನರು ಎಷ್ಟರಮಟ್ಟಿಗೆ ಮೂಲ ಸೌಕರ್ಯಗಳಿಂದ ವಂಚಿತರಾಗ್ತಿದ್ದಾರೆ ಎಂದು ತಿಳಿಯುತ್ತದೆ. ಈ ಫಲಿತಾಂಶದಿಂದ ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ದಿನಗಳಲ್ಲಿ ನಗರದ ಜನತೆ ತಕ್ಕ ಪಾಠ ಕಲಿಸುತ್ತಾರೆ. ಇದು ಎಚ್ಚರಿಕೆಯ ಗಂಟೆ ನೆನಪಿರಲಿ. ಪರಭಾವ ಗೊಂಡಿರುವ ಹನ್ನೊಂದನೆ ವಾರ್ಡಿನ ಚನ್ನಬಸವಗಾಳಿ ಅವರು ಮುಂದಿನ ದಿನಮಾನಗಳಲ್ಲಿ ನಮ್ಮ ಜೊತೆಯಲ್ಲಿ ಪಕ್ಷ ಸಂಘಟನೆಯ ಮಾಡಿ ವಾರ್ಡಿನ ಜನರ ಜೊತೆಯಲ್ಲಿರುತ್ತಾರೆ. ಮುಂದಿನ ದಿನಗಳಲ್ಲಿ ಸಹ ನಮ್ಮ ಅಭ್ಯರ್ಥಿಗಳು ಎಲ್ಲಾ ಕ್ಷೇತ್ರದಲ್ಲಿ ಸ್ಪರ್ಧಿಸುತ್ತಾರೆ ಮತ್ತು ಗೆಲವು ಪಡೆಯುತ್ತಾರೆ ಎಂಬ ವಿಶ್ವಾಸವಿದೆ.

ನಮ್ಮದು ಪಕ್ಷ ಸಂಘಟನೆ ಮೂಲ ಮಂತ್ರ ಎಂದು ತಿಳಿಸಿದ್ದಾರೆ. ಎಂಟನೆಯ ವಾರ್ಡಿನ ಗೆದ್ದಿರುವ ನಮ್ಮ ಪಾರ್ಟಿಯ ಕವಿತಾ ಅವರೇ ಮೊದಲು ವಾರ್ಡಿನ ಮೂಲ ಸೌಕರ್ಯಕ್ಕೆ ಒತ್ತು ನೀಡಿ, ನಿಮ್ಮ ಜೊತೆಯಲ್ಲಿ ನಮ್ಮ ಪಾರ್ಟಿಯವರು ಮತ್ತು ವಾರ್ಡಿನ ಜನರು ನಿಮ್ಮ ಜತೆಯಲ್ಲಿರುತ್ತೇವೆ ಎಂದು ಇದೇ ವೇಳೆ ಗೆದ್ದ ಅಭ್ಯರ್ಥಿಗೆ ಕ್ಯಾವಟರ್ ಅವರು ಸಲಹೆ ನೀಡಿದ್ದಾರೆ.

# ವಿಪತ್ತು ನಿರ್ವಹಣೆಯಲ್ಲಿ ಮುಂಜಾಗ್ರತೆ, ಪೂರ್ವಸಿದ್ಧತೆ ಅತ್ಯಗತ್ಯ: ಕ್ಯಾ ಮಹೇಶ್ ಮಾಲಗಿತ್ತಿ

**ಕೊಪ್ಪಳ :** ಎಲ್ಲಾ ಅಧಿಕಾರಿಗಳು ವಿಪತ್ತು ನಿರ್ವಹಣೆಯಲ್ಲಿ ಮುಂಜಾಗ್ರತೆ ಮತ್ತು ಪೂರ್ವಸಿದ್ಧತೆ ಕೈಗೊಳ್ಳುವುದು ಅತ್ಯಗತ್ಯವಾಗಿದೆ ಎಂದು ಕೊಪ್ಪಳ ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ ಹೇಳಿದರು.



ಆಡಳಿತ ತರಬೇತಿ ಸಂಸ್ಥೆ ಮೈಸೂರು, ಜಿಲ್ಲಾ ತರಬೇತಿ ಸಂಸ್ಥೆ ಹಾಗೂ ಜಿಲ್ಲಾಡಳಿತ ಕೊಪ್ಪಳ ರವರ ಸಹಭಾಗಿತ್ವದಲ್ಲಿ ಜಿಲ್ಲಾ ಕೇಂದ್ರಿತ ವಿಕೋಪ ನಿರ್ವಹಣಾ ಯೋಜನೆಯ ಕುರಿತು ಜಿಲ್ಲೆಯ ವಿವಿಧ ಇಲಾಖೆಯ ಎ ಮತ್ತು ಬಿ ವೃಂದದ ಅಧಿಕಾರಿಗಳಿಗೆ ನಗರದ ತಹಶೀಲ್ದಾರ ಕಾರ್ಯಾಲಯದ ಕೊಪ್ಪಳ ಜಿಲ್ಲಾ ತರಬೇತಿ ಸಂಸ್ಥೆಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಎ ಮತ್ತು ಬಿ ವೃಂದದ ಅಧಿಕಾರಿಗಳಿಗೆ ವಿಕೋಮ ನಿರ್ವಹಣೆ ಕಾಯ್ದೆಗಳ ಬಗ್ಗೆ ತಿಳಿದುಕೊಂಡು ಸರಿಯಾಗಿ ಕಾರ್ಯನಿರ್ವಹಿಸಬೇಕು.

ವಿಪತ್ತು ಸಂದರ್ಭದಲ್ಲಿ 24*7ರಂತೆ ಕಾರ್ಯನಿರ್ವಹಿಸಲು ಸಿದ್ಧರಿರಬೇಕು. ಇಲಾಖೆಗಳ ಪ್ರತಿ ಇಲಾಖೆಯಲ್ಲು ವಿಕೋಪ ನಿರ್ವಹಣೆಯ ಜಾಗೃತಿ ಪೂರ್ವಸಿದ್ದತೆ ಸ್ಪಂದನೆ ಮತ್ತು ಪುನರ್ ವಸತಿ ವಿಷಯಗಳ ಬಗ್ಗೆ ಯೋಜನೆಯನ್ನು ಸಿದ್ದಪಡಿಸಿಕೊಳ್ಳಬೇಕು. ಜಿಲ್ಲಾ ಕೇಂದ್ರಿತ ವಿಕೋಪ ನಿರ್ವಹಣಾ ಯೋಜನೆಯ ಪರಿಷ್ಕರಣೆ ಅತ್ಯಗತ್ಯವಾಗಿದೆ ಎಂದು ತಿಳಿಸಿದರು.

ಕೊಪ್ಪಳ ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಮೂರ್ತಿ ದೇಸಾಯಿ ಅವರು ಮಾತನಾಡಿ, ಜಿಲ್ಲಾ ಕೇಂದ್ರಿತ ವಿಕೋಪ ನಿರ್ವಹಣಾ ಯೋಜನೆ ಕೊಪ್ಪಳ ಜಿಲ್ಲೆ ವಿಷಯದ ಕುರಿತು ಜಿಲ್ಲೆಯ ವಿವಿಧ ಇಲಾಖೆಯ ಎ ಮತ್ತು ಬಿ ವೃಂದದ ಅಧಿಕಾರಿಗಳಿಗೆ ನ.26 ಮತ್ತು 27ರಂದು ಎರಡು ದಿನಗಳ ಕಾಲ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಈ ಸಂದರ್ಭದಲ್ಲಿ ವಿಕೋಪ ನಿರ್ವಹಣಾ ಕೇಂದ್ರ ಮೈಸೂರು ಆಡಳಿತ ತರಬೇತಿ ಸಂಸ್ಥೆಯ ಬೋಧಕರಾದ ಡಾ.ಪರಮೇಶ ಜೆ.ಆರ್., ಕೊಪ್ಪಳ ತಹಶೀಲ್ದಾರ ವಿಠಲ್ ಚೌಗಲ ಸೇರಿದಂತೆ ಮತ್ತಿತರರಿದ್ದರು.

ವಿಶೇಷ ತರಬೇತಿ: ವಿಕೋಪ ನಿರ್ವಹಣಾ ಕೇಂದ್ರ ಮೈಸೂರು ಆಡಳಿತ ತರಬೇತಿ ಸಂಸ್ಥೆಯ ಬೋಧಕರಾದ ಡಾ.ಪರಮೇಶ್ ಜೆ.ಆರ್ ಅವರು ಕಾರ್ಯಕ್ರಮವನ್ನು ಸಂಯೋಜನೆ ಮಾಡಿ, ವಿಕೋಪ ನಿರ್ವಹಣಾ ಯೋಜನೆಗಳ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ತರಬೇತಿಯಲ್ಲಿ ವಿವಿಧ ಇಲಾಖೆಗಳ ಎ ಮತ್ತು ಬಿ ವೃಂದದ ಅಧಿಕಾರಿಗಳು ಭಾಗವಹಿಸಿದ್ದರು.

ಜಿಲ್ಲಾ ತರಬೇತಿ ಸಂಸ್ಥೆಯ ಭೋದಕಿ ನರ್ಮದಾ ಅವರು ಸ್ವಾಗತ ಕಾರ್ಯಕ್ರಮ ನಡೆಸಿದರು ಮತ್ತು ಜಿಲ್ಲಾ ತರಬೇತಿ ಸಂಸ್ಥೆಯ ಭೋದಕ ಎಂ ಶ್ರೀಧರ್ ಅವರು ನಿರೂಪಿಸಿದರು.

# ನಮ್ಮನ್ನು ನಾವು ಅರಿತುಕೊಡು ಸಮಾನತೆಯಿಂದ ಜೀವಿಸಬೇಕು: ಪ್ರೊ. ಕೆ. ವಿ. ಪ್ರಸಾದ್



**ಕೊಪ್ಪಳ :** ನಮ್ಮನು ನಾವು ಅರಿತುಕೊಡು, ಸಮಾನತೆಯಿಂದ ಜೀವಿಸಬೇಕು ಎಂದು ಕೊಪ್ಪಳ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ. ಕೆ.ವಿ.ಪ್ರಸಾದ್ ಹೇಳಿದರು.

ಅವರು ಕೊಪ್ಪಳ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸಂವಿಧಾನ ದಿನಾಚರಣೆಯಲ್ಲಿ ಸಂವಿಧಾನ ಪೀಠಿಕೆಗೆ ಹಾಗೂ ಡಾ. ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮೂಲಕ ಗೌರವ ನಮನ ಸಲ್ಲಿಸಿ ಮಾತನಾಡಿದರು. ಭಾರತ ಸಂವಿಧಾನವು ಎಲ್ಲರಿಗೂ ಸ್ವತಂತ್ರ ಸಮಾನತೆ ನೀಡಿದೆ. ಅದನ್ನು ಕಾಪಾಡಿಕೊಳ್ಳುವುದು ನಮ್ಮೆಲ್ಲರ ಹಕ್ಕು ಹಾಗೂ ನಮ್ಮ ಸುತ್ತಮುತ್ತಲಿನ ಜನರಿಗೂ ಸಂವಿಧಾನದ ಅರಿವನ್ನು ಮೂಡಿಸಬೇಕು ಎಂದರು.

ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರಕಾಶ ಯಳವಟ್ಟಿ ಮಾತನಾಡಿ, ಸಂವಿಧಾನದಲ್ಲಿರುವ ಆದರ್ಶಗಳನ್ನು ದಿನನಿತ್ಯ ಜೀವನದಲ್ಲಿ ಪಾಲಿಸಿ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಚಾಂದ್ ಬಾಷಾ ಮತ್ತು ಪ್ರವೀಣ ಪೊಲೀಸ್ ಪಾಟೀಲ, ಸಂತೋಷ ಕುಮಾರ, ಪಾರ್ವತಿ, ವಿರೂಪಾಕ್ಷ, ಪಾಪಣ್ಣ, ಅಯ್ಯಪ್ಪ,ಶ್ರೀಕಂತ್, ಸುಧಾಕರ್, ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

## ಚಳಿಗಾಲ ಅಧಿವೇಶನ: ಡಿ.1 ರಿಂದ 30 ವರೆಗೆ ನಿಷೇದಾಜ್ಞೆ

**ಬೆಳಗಾವಿ :** ಸುವರ್ಣ ವಿಧಾನ ಸೌಧದದಲ್ಲಿ ಡಿ.9 ರಿಂದ 20 ರವರೆಗೆ ಚಳಿಗಾಲ ಅಧಿವೇಶನ ನಡೆಯಲಿದೆ. ಅಧಿವೇಶನ ಕಾಲಕ್ಕೆ ಕಾನೂನು ಮತ್ತು ಸುವ್ಯವಸ್ಥೆ ಮತ್ತು ಸಾರ್ವಜನಿಕ ಶಾಂತತೆ ಕಾಪಾಡುವ ಹಿತದೃಷ್ಟಿಯಿಂದ ಸುವರ್ಣ ವಿಧಾನ ಸೌಧದ ಸುತ್ತಲೂ ಸುಮಾರು 500 ಮೀ. ಸುತ್ತಳತೆಯಲ್ಲಿ ಡಿ.1 ರಿಂದ 30 ವರೆಗೆ ನಿಷೇದಾಜ್ಞೆ ಹೊರಡಿಸಿ ನಗರದ ಹೆಚ್ಚುವರಿ ಜಿಲ್ಲಾ ದಂಡಾಧಿಕಾರಿ, ಪೊಲೀಸ್ ಆಯುಕ್ತರಾದ ಯಡಾ ಮಾರ್ಟಿನ್ ಮಾರ್ಬನ್ಯಾಂಗ ಅವರು ಆದೇಶಿಸಿದ್ದಾರೆ. ಸದರಿ ಆದೇಶವನ್ನು ಉಲ್ಲಂಘಿಸುವವರ ವಿರುದ್ಧ ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಪ್ರಕಾರ ಕ್ರಮವನ್ನು ಜರುಗಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾಂವಿಧಾನಿಕ ಹಕ್ಕು ಮತದಾನವನ್ನೇ ಇಲ್ಲದಂತೆ ಮಾಡಬೇಕೆನ್ನುವ ಸ್ವಾಮೀಜಿಗಳ ಹೇಳಿಕೆ ಅಸಾಂವಿಧಾನಿಕ: ವೆಲ್ಫೇರ್ ಪಾರ್ಟಿ

**ಬೆಂಗಳೂರು:** ಮುಸ್ಲಿಮರ ಮತದಾನದ ಹಕ್ಕು ಇಲ್ಲದಂತೆ ಮಾಡಬೇಕು, ವಕ್ಫ್ ಮಂಡಳಿಯನ್ನೇ ರದ್ದು ಪಡಿಸಬೇಕು ಎಂದು ಚಂದ್ರ ಶೇಖರ ಸ್ವಾಮೀಜಿಯವರ ಹೇಳಿಕೆ ಅತ್ಯಂತ ಖಂಡನಿಯ. ಇದು ಸಮಾಜದಲ್ಲಿ ಸಾಮರಸ್ಯ ಕೆಡಿಸುವ ಪ್ರಚೋದಕ ಹೇಳಿಕೆಯಾಗಿದೆ ಎಂದು ವೆಲ್ಫೇರ್ ಪಾರ್ಟಿ ಕರ್ನಾಟಕ ರಾಜ್ಯ ಅಧ್ಯಕ್ಷಅಡ್ವೋಕೇಟ್ ತಾಹೇರ್ ಹುಸೇನ್ ಹೇಳಿದ್ದಾರೆ.




ಅವರು ಮಾತನಾಡುತ್ತಾ "ಸ್ವಾಮೀಜಿಗಳ ಈ ಹೇಳಿಕೆ ಸಂವಿಧಾನ ವಿರೋಧಿಯಾಗಿದೆ ಇದು ಮುಸ್ಲಿಮರ ಭಾವನೆಯನ್ನು ಘಾಸಿ ಗೊಳಿಸಿದೆ. ಸಂವಿಧಾನ ಎಪ್ಪತ್ತೈದನೇ ವರ್ಷಾಚರಣೆಯ ದಿನದಂದೇ ಇಂತಹ ಕೀಳ್ಮಟ್ಟದ ಸಂವಿಧಾನ ವಿರೋಧಿ ಮಾತುಗಳು ಸ್ವಾಮೀಜಿಹೇಳಬಾರದಿತ್ತುಇದುಅವರಸ್ಥಾನಮಾನಕ್ಕೆ ವಿರುದ್ಧ ವಾದ ಮಾತುಗಳು. ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಅರಳಿಸುವ ಮಾತುಗಳನ್ನಾಡಬೇಕಾದ ಸ್ವಾಮೀಜಿಯವರು ಸಮಾಜವನ್ನು ಕೆರಳಿಸುವ ಪ್ರಯತ್ನ ಮಾಡಿದ್ದಾರೆ.

ಅವರ ಮಾತುಗಳನ್ನು ಗಮನಿಸಿದಾಗ ವಕ್ಫ್ ಎಂದರೆ ಏನೆಂಬುದರ ಬಗ್ಗೆ ಅವರಿಗೆ ಸಾಮಾನ್ಯ ಜ್ಞಾನವೂ ಇಲ್ಲ ಎಂಬುದು ಮನದಟ್ಟಾಗುತ್ತದೆ. ರೈತರ ಹಸಿರು ಶಾಲು ಹಾಕಿಕೊಂಡು ಸಮಾಜದಲ್ಲಿ ಅಶಾಂತಿಯ ಮತ್ತು ಅಲ್ಪಸಂಖ್ಯಾತರ ಮೂಲಭೂತ ಹಕ್ಕನ್ನು ಕಸಿಯುವ ಮಾತುಗಳನ್ನು ಆಡಿರುವುದು ಖಂಡನೀಯ.

ಮುಸಲ್ಮಾನರು ಈ ದೇಶದ ನಾಗರಿಕರು, ಈ ದೇಶದ ಸ್ವಾತಂತ್ರಕ್ಕಾಗಿ ತ್ಯಾಗ ಬಲಿದಾನ ಕೊಟ್ಟಿರುವವರು ಅವರಿಗೆ ಮತದಾನದ ಹಕ್ಕು ಇಲ್ಲವಾಗಿಸಲು ಯಾರಿಂದಲೂ ಸಾಧ್ಯವಿಲ್ಲ. ಸಮಾಜದಲ್ಲಿ ಉನ್ನತ ಸ್ಥಾನದಲ್ಲಿರುವ ಸ್ವಾಮೀಜಿಯವರು ಬಿಜೆಪಿಯ ಸುಳ್ಳು ಪ್ರಚಾರ ದಿನದಿಂದ ಪ್ರಭಾವಿತರಾಗಿ ವಖ್ಫ್ ಬಗ್ಗೆ ಹೇಳಿಕೆ ನೀಡಿರುವುದು ಅಚ್ಚರಿ ಮತ್ತು ಬೇಸರ ತಂದಿದೆ. ಧರ್ಮಗುರುಗಳು ಸಮಾಜದಲ್ಲಿ ಸಾಮರಸ್ಯವನ್ನು ಬೆಳೆಸುವ ಕೆಲಸ ಮಾಡಬೇಕೇ ಹೊರತು ಸಮಾಜದಲ್ಲಿ ಒಡಕುಮತ್ತುದ್ವೇಷಹರಡಿಸಲಿಕ್ಕೆಕಾರಣರಾಗಬಾರದು. ಸ್ವಾಮೀಜಿಗಳ ಇಂತಹ ಹೇಳಿಕೆಗಳು ಅವರ ಘನತೆಗೆ ದಕ್ಕೆ ತರುತ್ತದೆ ಎಂದೂ ಅವರು ಹೇಳಿದರು.

# ಜವಳಿ ಆಯುಕ್ತರಿಗೆ ಭೇಟಿ



**ಮಹಾಲಿಂಗಪುರ :** ಸ್ಥಳೀಯ ಪುರಸಭೆ ಮಾಜಿ ಅಧ್ಯಕ್ಷರು, ಸೌಜನ್ಯ ನೇಕಾರ ಸೊಸೈಟಿ ಅಧ್ಯಕ್ಷ ಜಿ.ಎಸ್.ಗೊಂಬಿ ಅವರು ಬೆಂಗಳೂರಿನ ರಾಜ್ಯ ಜವಳಿ ಇಲಾಖೆಯ ಆಯುಕ್ತರಾದ ಕೆ.ಜ್ಯೋತಿ ಮೇಡಂ ಭೇಟಿ ಮಾಡಿ ಮನವಿ ಸಲ್ಲಿಸಿ, ರಾಜ್ಯದ ನೇಕಾರರ ಸಮಸ್ಯೆಗಳ ಕುರಿತು ಚರ್ಚೆ ನಡೆಸಿದರು. ಇತ್ತೀಚಿಗೆ ಮನೆ ಕಟ್ಟಡ ಸಾಮಗ್ರಿಗಳ ಬೆಲೆಯು ಗಗನ ಮುಟ್ಟಿರುವದರಿಂದ ನೇಕಾರರರು ಮನೆ ನಿರ್ಮಾಣ ಕಷ್ಟವಾಗುತ್ತಿದೆ. ಮನೆಗಳ ನಿರ್ಮಾಣಕ್ಕೆ ಇಲಾಖೆಯ ವತಿಯಿಂದ ಹೆಚ್ಚಿನ ಸಹಾಯ ಧನ ನೀಡಲು ವಿನಂತಿಸಿದರು. ಆಯುಕ್ತರು ಈ ಮನವಿಗೆ ಸಾಕಾರಾತ್ಮಕವಾಗಿ ಸ್ಪಂದಿಸಿ ಇದೊಂದು ಒಳ್ಳೆ ವಿಚಾರ ರಾಜ್ಯದ ಪ್ರದಾನ ಕಾರ್ಯದರ್ಶಿಗಳ ಜೊತೆಗೆ ಮಾತನಾಡುತ್ತೇನೆ.

ಕೊಡಲೇ ಸರ್ಕಾರಕ್ಕೆ ಪತ್ರ ಬರೆಯುತ್ತೇನೆ. ಮುಂಬರುವ ದಿನಗಳಲ್ಲಿ ಬಾಗಲಕೋಟೆ, ಬಿಜಾಪುರ, ಬೆಳಗಾವಿ ಭಾಗಕ್ಕೆ ಭೇಟಿ ನೀಡಿ ನೇಕಾರರ ಸಮಸ್ಯೆಗಳನ್ನು ಆಲಿಸುತ್ತೇನೆ ಎಂದು ಭರವಸೆ ನೀಡಿದ್ದಾರೆ ಎಂದು ಜಿ.ಎಸ್.ಗೊಂಬಿ ತಿಳಿಸಿದ್ದಾರೆ.

# ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗೆ ಚಾಲನೆ

**ಮಹಾಲಿಂಗಪುರ :** ಸರ್ಕಾರದ ಹಣದಿಂದ ನಿರ್ಮಾಣವಾಗುವ ಶಾಲಾ ಕೊಠಡಿಗಳು ಗುಣಮಟ್ಟದಿಂದ ಕೂಡಿರಲಿ ಎಂದು ತೇರದಾಳ ಮತಕ್ಷೇತ್ರದ ಶಾಸಕ ಸಿದ್ದು ಸವದಿ ಹೇಳಿದರು.

ಪಟ್ಟಣದ ಡಚ್ ಕಾಲೋನಿಯಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎರಡನೇ ಅಂತಸ್ಥಿನ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾಮಾಗಾರಿಯ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು ಸರ್ಕಾರ ಪ್ರತಿವರ್ಷ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಾಕಷ್ಟು ಹಣ ವೆಚ್ಚ ಮಾಡುತ್ತಿದೆ. ಯಾವುದೇ ವಿದ್ಯಾರ್ಥಿಗಳು ವಿದ್ಯಾರ್ಜನೆಯಿಂದ ವಂಚಿತರಾಗಬಾರದು ಎನ್ನುವುದು ಇದರ ಉದ್ದೇಶವಾಗಿದೆ. ವಿದ್ಯಾವಂತ ಯುವಕರಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ.ಅಂದಾಜು 27.80 ಲಕ್ಷ ರೂಗಳ ವೆಚ್ಚದಲ್ಲಿ ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ ಎಂದರು. ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಉಪಾಧ್ಯಕ್ಷೆ ಶೀಲಾ ಭಾವಿಕಟ್ಟಿ, ಶಾಸಕ ಸಿದ್ದು ಅವರನ್ನು ಶಾಲೆಯವತಿಯಿಂದ ಸನ್ಮಾನಿಸಲಾಯಿತು.



ಪುರಸಭೆ ಸದಸ್ಯರಾದ ಬಸವರಾಜ ಯರಗಟ್ಟಿ, ಬಲವಂತಗೌಡ ಪಾಟೀಲ, ಮುಸ್ತಾಕ ಚಿಕ್ಕೋಡಿ, ಶೇಖರ ಅಂಗಡಿ, ಮುಖಂಡರಾದ ಈರಪ್ಪ ದಿನ್ನಿಮನಿ, ಶಂಕರಗೌಡ ಪಾಟೀಲ, ಜಿ.ಎಸ್ ಗೊಂಬಿ, ಚನ್ನಪ್ಪ ಪಟ್ಟಣಶೆಟ್ಟಿ, ಶ್ರೀಮಂತ ಹಳ್ಳಿ, ಮಹಾಲಿಂಗಪ್ಪ ಕುಳ್ಳೋಳ್ಳಿ, ರಾಜೇಶ ಬಾವಿಕಟ್ಟಿ, ವಿಜಯ ಸಬಕಾಳೆ, ಡಾ. ಅಶೋಕ ದಿನ್ನಮನಿ, ಹರೀಶ ನಾಯಕ, ಶಿವಬಸು ಗೌಂಡಿ, ಅಲ್ಲಪ್ಪ ಲೋಕಾಪೂರ, ಎಸ್.ಡಿ.ಎಂ.ಸಿ ಅಧ್ಯಕ್ಷ ಶಶಿಧರ ಹಳ್ಳಿ, ಉಪಾಧ್ಯಕ್ಷೆ ಸಕ್ಕುಬಾಯಿ ನಾಯಕ, ಸದಸ್ಯರಾದ ಮುರಗೇಶ ಫಂಕಿ, ಶಿವಾನಂದ ಕಿತ್ತೂರ, ಮಂಜುನಾಥ ಹುಲಕುಂದ, ಉಮಾ ಸಪ್ತಸಾಗರ, ಕಬಾನಾ ಬಿಸ್ತಿ, ಪ್ರಕಾಶ ಬನಾಜ, ಈಶ್ವರ ಪವಾರ, ಮುಖ್ಯಗುರುಗಳಾದ ರೋಹಿಣಿ ಸುಣಧೋಳಿ ಸೇರಿದಂತೆ ಹಲವರು ಇದ್ದರು.

# ಇಂಜಿನಿಯರಿಂಗ್ ವಿದ್ಯಾರ್ಥಿನಿಗೆ ಲ್ಯಾಪ್‌ಟಾಪ್‌ಗೆ ವಿತರಣೆ



**ಮಹಾಲಿಂಗಪುರ :** ಸಮೀರವಾಡಿ ಶಿಷ್ಯವೇತನ ವಿತರಣಾ ಸಮಾರಂಭದಲ್ಲಿ ಇಂಜಿನಿಯರಿಂಗ್ ಕಲಿಯುತ್ತಿರುವ ವಿದ್ಯಾರ್ಥಿನಿ ಪೂಜಾ ಗೌಡವಾಡಗೆ ಕಾರ್ಖಾನೆ ತಾಂತ್ರಿಕ ವಿಭಾಗದ ಮುಖ್ಯಸ್ಥರಾದ ದಿನೇಶ ಶರ್ಮಾ ಲ್ಯಾಪ್‌ಟಾಪ್ ವಿತರಿಸಿದರು.

# ಮೂಡಲಗಿಯಲ್ಲಿ ಅದ್ದೂರಿ ಸಂವಿಧಾನ ಜಾಗೃತಿ ಜಾಥಾ

**ಮೂಡಲಗಿ :** ಜಗತ್ತಿನ ಅತೀ ಶ್ರೇಷ್ಠ ಸಂವಿಧಾನವಾದ ನಮ್ಮ ದೇಶದ ಹೆಮ್ಮೆಯ ಸಂವಿಧಾನ ಸಮರ್ಪಣೆಯ ಅಮೃತ ಮಹೋತ್ಸವದ ಅಂಗವಾಗಿ ಮೂಡಲಗಿ ಪಟ್ಟಣದ ಶ್ರೀ ಶ್ರೀಪಾದಬೋಧ ಸ್ವಾಮೀಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಬೃಹತ್ ಸಂವಿಧಾನ ಜಾಗೃತಿ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು.

ಮಹಾವಿದ್ಯಾಲಯದ ಎಲ್ಲಾ ಉಪನ್ಯಾಸಕರು ಸುಮಾರು 1200 ವಿದ್ಯಾರ್ಥಿಗಳೊಂದಿಗೆ ಕಾಲೇಜಿನಿಂದ ಪಟ್ಟಣದ

ಡಾ. ಬಿ. ಆರ್. ಅಂಬೇಡ್ಕರ್ ವೃತ್ತದವರೆಗೆ ಸಂವಿಧಾನ ಜಾಗೃತಿ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಸಾಗಿದರು. ಅಂಬೇಡ್ಕರ್ ವೃತ್ತದಲ್ಲಿ ಸಮಾವೇಶಗೊಂಡು, ಅಲ್ಲಿ ಸಂವಿಧಾನದ ಪೀಠಿಕೆಯ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಮಹೇಶ ಕಂಬಾರ ಮಾತನಾಡಿ ನಮ್ಮ ಮಹಾವಿದ್ಯಾಲಯವು ಪ್ರತಿ ವರ್ಷದಂತೆ ಈ ವರ್ಷವೂ ಸಹ



ವಿಶಿಷ್ಟವಾಗಿ ಆಚರಿಸುತ್ತ ಬಂದಿದ್ದು, ಕಳೆದ ಸಾಲಿನಲ್ಲಿ 'ಮನೆ ಮನೆಗೆ ಸಂವಿಧಾನ' ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದ್ದನ್ನು ಸ್ಮರಿಸಿದರು. ದೇಶದ ಪ್ರತಿಯೊಬ್ಬ ಪ್ರಜೆಗೂ ಸಮಾನ ಅವಕಾಶವನ್ನು ಕಲ್ಪಿಸಿರುವ ಸಂವಿಧಾನವು ಈ ದೇಶದ ನಾಡಿಮಿಡಿತವಾಗಿದೆ ಮತ್ತು ಪ್ರತಿಯೊಬ್ಬರೂ ಸಂವಿಧಾನದ ಆಶಯಗಳಿಗೆ ತಕ್ಕಂತೆ ಬದುಕಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೂಡಲಗಿಯ ಸಮಾಜ ಕಲ್ಯಾಣ ಇಲಾಖೆಯ ನಿಲಯಪಾಲಕ ಯಲ್ಲಪ್ಪ ಭಜಂತ್ರಿಯವರು ಪೀಠಿಕೆಯ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ಕಾರ್ಯಕ್ರಮದಲ್ಲಿ ಗುತ್ತಿಗೆದಾರ ಮರಿಯಪ್ಪ ಮರೆಪ್ಪಗೋಳ, ಶಾಬು ಸಣ್ಣಕ್ಕಿ, ಸುರೇಶ ಸಣ್ಣಕ್ಕಿ, ಉಪನ್ಯಾಸಕರಾದ ಸಂಜೀವ ಗಾಣಿಗೇರ, ಸಂಜೀವ ಮದರಖಂಡಿ, ಚೇತನ್‌ರಾಜ್, ಯೋಗಿನಿ, ರಾಧಾ ಎಂ. ಎನ್, ಸುಮಿತ್ರಾ ಮಾಸ್ತಿ, ಶಿವಾನಂದ ಚಂಡಕೆ, ಪ್ರಸಾದ ವಗ್ಗನ್ನವರ, ನಿಂಗಪ್ಪ ಸಂಗ್ರೋಜಿಕೊಪ್ಪ, ಡಾ. ಹಾಲಪ್ಪ ಮಡಿವಾಳರ, ಹನಮಂತ ಕಾಂಬಳೆ ಮುಂತಾದವರು ಭಾಗವಹಿಸಿದ್ದರು.

# ಯೂನಿಯನ್ ಚುನಾವಣೆ: ನೈರುತ್ಯ ರೈಲ್ವೆ ಮಜ್ದೂರ್ ಸಂಘ ಬೆಂಬಲಿಸಿ..!

**ಹುಬ್ಬಳ್ಳಿ :** ಕೇಂದ್ರ ಸರ್ಕಾರ ಎನ್‌ಪಿಎಸ್ ಬದಲಾಗಿ ನೂತನವಾಗಿ ಜಾರಿಗೊಳಿಸಿರುವ ಯುಪಿಎಸ್ (ಯುನಿಫೈಡ್ ಪೆನ್ಶನ್ ಸೀಂ), ಓಪನ್ ಎಲ್.ಡಿಸಿ, ರೈಲ್ವೆ ವಿವಿಧ ವಿಭಾಗಗಳ ಖಾಸಗೀಕರಣ ಸೇರಿದಂತೆ ಅನೇಕ ಸಮಸ್ಯೆಗಳ ಪರಿಹಾರಕ್ಕಾಗಿ ಈ ಸಲ ನೈರುತ್ಯ ರೈಲ್ವೆ ಮಜ್ದೂರ್ ಸಂಘವನ್ನು ಬೆಂಬಲಿಸಿ ಎಂದು ಎನ್.ಆರ್.ಎಂ.ಎಸ್ ವಲಯದ ಉಪ ಅಧ್ಯಕ್ಷ ಬಾಬಣ್ಣ ಅವರು ರೈಲ್ವೆ ಕಾರ್ಮಿಕರಿಗೆ ಮನವಿ ಮಾಡಿದರು.

ನಗರದ ಎಂಜಿನಿಯರಿಂಗ್ ಬ್ರ್ಯಾಂಚ್ ಆಫೀಸ್ ನಲ್ಲಿ ಗುರುವಾರ ಚುನಾವಣಾ ಪ್ರಚಾರ ಉದ್ದೇಶಿ ಅವರು ಮಾತನಾಡಿದರು. ಮುಂದಿನ ಐದು ವರ್ಷಗಳವರೆಗೆ ರೇಲ್ವೆ ಇಲಾಖೆಯಲ್ಲಿ ಹಲವಾರು ಬದಲಾಣೆಗಾಗಿ ಒಂದು ಬಾರಿ ಸಂಘಕ್ಕೆ ಅವಕಾಶ ನೀಡಿ, ರೈಲ್ವೆ ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಹೇಳಿದರು.

ವಿಭಾಗದ ಕಾರ್ಯದರ್ಶಿ ಎಸ್. ಧನಂಜಯ್ ಮಾತನಾಡಿ, ಈ ಮೊದಲಿನಂತೆ ಹಳೇ ಪಿಂಚಣಿ ಮರು ಜಾರಿಗೊಳಿಸಬೇಕು.

ಖಾಸಗೀಕರಣ ತೆರವುಗೊಳಿಸಬೇಕು. ಖಾಲಿ ಇರುವ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಬೇಕು

ಎಂಬುದು ಸೇರಿದಂತೆ ಹಲವಾರು ಬೇಡಿಕೆಗಳನ್ನು ಈಡೇರಿಸುವಂತೆ



ಹೋರಾಡುತ್ತಿದ್ದೇವೆ.

ಈಗ ರೈಲ್ವೆ ಇಲಾಖೆಯೊಂದಿಗೆ ನೇರವಾಗಿ ಮಾತುಕತೆ ನಡೆಸುವ ಅವಕಾಶ ಸಿಕ್ಕಿದ್ದಲ್ಲಿ ನೌಕರರ ಬೇಡಿಕೆ ಈಡೇರಿಸಲು ಅನುಕೂಲವಾಗಲಿದೆ ಎಂದು ಹೇಳಿದರು.

ಹುಬ್ಬಳ್ಳಿ ವಿಭಾಗದ ಕಾರ್ಯದರ್ಶಿ ಮಂಜುನಾಥ ಜಾಧವ ಮಾತನಾಡಿ, ರೈಲ್ವೆಯಲ್ಲಿ ಮಹತ್ವ ಬದಲಾಣೆಗಾಗಿ ಈ ಸಲ ಸಂಘಕ್ಕೆ ಮತ ನೀಡಿದ್ರೆ ಮಾತ್ರ ರೈಲ್ವೆ ನೌಕರರಿಗೆ ಪಿಂಚಣಿ ಏಕೆ ಕೊಡುತ್ತಿಲ್ಲ ಎಂದು ಪ್ರಶ್ನಿಸುವ ಅಧಿಕಾರ ಸಂಘಕ್ಕೆ ಬರಲಿದೆ.

ಈ ಕೆಲಸವನ್ನು 10 ವರ್ಷಗಳಿಂದ ಅಧಿಕಾರದಲ್ಲಿರುವ ಯುನಿಯನ್ ಗಳು ಏಕೆ ಮಾಡಲಿಲ್ಲ ಎಂದು ಆರೋಪಿಸಿದರು.

ವರ್ಕಶಾಪ್ ಕಾರ್ಯದರ್ಶಿ ನರೇಂದ್ರ ಜಾಧವ್ ಮಾತನಾಡಿ, ಶೋಷಣೆ ಮುಕ್ತ ಮತ್ತು ನಿಷ್ಪಕ್ಷಪಾತ ಕೆಲಸ ಮಾಡಲು ನಮ್ಮನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ನೈರುತ್ಯ ರೈಲ್ವೆ ಮಜ್ದೂರ್ ಸಂಘದ ವಿವಿಧ ವಿಭಾಗಗಳ ಪದಾಧಿಕಾರಿಗಳಾದ ನಾಗೇಶರಾವ್, ಪಾರ್ಥಸಾರಥಿ, ವಿಜಯಕುಮಾರ್, ಶಿರಾಜ್, ವಿನೋದ ರಾಠೋಡ, ಬ್ರಹ್ಮಾನಂದ, ಬಸಪ್ಪ ಜಟಗಿ, ಜಗದೀಶ್ ಭಜಂತ್ರಿ, ಸುನಿಲ್ ಪಾರ್ವತಿ, ಅಜ್ಜು, ಗುಣಶೇಖರ, ಮೊಹಮ್ಮದ್, ಯಲ್ಲಪ್ಪ ಗಾಣಗೇರ,

ಶರಣಪ್ಪ, ಸಲೀಂ, ದೀಪಕ್, ದೇವೇಂದ್ರ, ಬಸನಗೌಡ, ಸುನೀಲ್, ರಫೀಕ್, ರುಸ್ತುಂ, ಪರಸುರಾಮ, ಅಲ್ಲಾಬಕ್ಷ, ಶಿವು, ಮಹಾದೇವಪ್ಪ, ಸಂಪತಕುಮಾರ, ಗುಣ ಸೃಜನ್ ಸೇರಿದಂತೆ ಅನೇಕ ರೈಲ್ವೆ ನೌಕರರು ಉಪಸ್ಥಿತರಿದ್ದರು.

# ಮಧ್ಯ ವ್ಯಸನದಿಂದ ಮುಕ್ತಿವಂದಿ ನವಜೀವನಕ್ಕೆ ಕಾಲಿಟ್ಟ ಶಿಬಿರಾರ್ಥಿಗಳು





**ಮಂಡ್ಯ ಕೆ ಆರ್ ಪೇಟೆ :** ತಾಲೋಕಿನ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾ ಬಿ ಸಿ ಟ್ರಸ್ಟ್ ನ ವತಿಯಿಂದ ದಿನಾಂಕ 21,11,2024ರಂದು ಭೂಕನಕೆರೆ ಗ್ರಾಮದಲ್ಲಿ ಆಯೋಜಿಸಲಾಗಿದ ಕಾರ್ಯಕ್ರಮವನ್ನು ಮಾಜಿ ಶಾಸಕರಾದ ಕೆ ಬಿ ಚಂದ್ರಶೇಖರ ರವರು ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು ಇಂದು ಮದ್ಯ ವ್ಯಸನ ಶಿಬಿರದಲ್ಲಿ ಸುಮಾರು 60ಕ್ಕು ಹೆಚ್ಚು ಶಿಬಿರಾರ್ಥಿಗಳು ವ್ಯಸನದಿಂದ ಮುಕ್ತಿವಂದಿ ನವಜೀವಕ್ಕೆ ಕಾಲಿಟ್ಟರು

ತಾಲೋಕು ಯೋಜನಾಧಿಕಾರಿಗಳಾದ ಶ್ರೀ ತಿಲಕ್ ರಾಜ್ ರವರು ಕಾರ್ಯಕ್ರಮದ ಅತಿಥಿಗಳನ್ನು ಸ್ವಾಗತದೊಂದಿಗೆ ಗೌರವಿಸಿ ಸನ್ಮಾನಿಸಿದರು

ಆರ್ ಟಿ ಓ ಮಲ್ಲಿಕಾರ್ಜುನ್ ಮಾತನಾಡಿ ಶ್ರೀ ಕ್ಷೇತ್ರ ಧರ್ಮಾಧಿಕಾರಿಗಳಾದ ಶ್ರೀ ಪರಮಪೂಜ್ಯ ವೀರೇಂದ್ರ ಹೆಗಡ್ಡೆ ಯವರ ಹುಟ್ಟುಹಬ್ಬದ ದಿನದ ಶುಭ ಕೋರಿ, ಭಕ್ತಿ ಶ್ರದೆ ಹಾಗೂ ಸಮಾಜದ ಆಸ್ತಿಯಾಗಿ ಕುಟುಂಬಕ್ಕೆ ಅದರವಾಗಿ ಜೀವನ ನಡೆಸುವುದರ ಜೊತೆಗೆ ವ್ಯಸನ ಮುಕ್ತರಾಗಿ ಸದೃಢ ಹಾಗೂ ವ್ಯಸನ ಮುಕ್ತ ಸಮಾಜದೊಂದಿಗೆ ಜೀವನ ನೆಡುಸುವಂತೆ ಮನವಿ ಮಾಡಿದರೂ

ತದನಂತರ ಮಾಜಿ ಸಚಿವರಾದ ಡಾ ಕೆ ಸಿ ನಾರಾಯಣ ಗೌಡ್ರು ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆ ಹಾಗೂ ಪರಮಪೂಜ್ಯ ಶ್ರೀ ವೀರೇಂದ್ರ ಹೆಗಡೆಯರು ನೇತೃತ್ವದಲ್ಲಿ ಸಮಾಜದ ಅಭಿವೃದ್ಧಿಯ ಹತ್ತಾರೋ ಯೋಜನೆಗಳನ್ನು ಹಮ್ಮಿಕೊಳ್ಳುವ ಮೂಲಕ ಸಮಾಜದ ಹೇಳಿಗ್ಗೆ ಶ್ರಮಿಸುತಿರುದು ತಮ್ಮೆಲ್ಲರಿಗೂ ತಿಳಿದಿರುವ ಸುದಿಯೇ, ಹಾಗೂ ನಾನು ಈ ರಾಜ್ಯದ ಸಚಿವನಾಗಲು ಶ್ರೀ ಮಂಜುನಾಥ್ ಸ್ವಾಮಿಯ ಕೃಪಾಶೀರ್ವಾದವನ್ನು ನೆನೆದು ಶಿಬಿರಾರ್ಥಿಗಳಿಗೆ ಮತ್ತೊಮ್ಮೆ ಇಂತಹ ದುಶ್ಚಟಗಳಿಗೆ ಬಲಿಯಾಗದೆ ವ್ಯಸನ ಮುಕ್ತರಾಗಿ ಜೀವನ ನೆಡಸುವಂತೆ ತಿಳಿಸಿದರು.

ಈ ಸುಸಂದರ್ಭದಲ್ಲಿ ಮಾಜಿ ಸಚಿವರಾದ ಕೆ ಸಿ ನಾರಾಯಣ ಗೌಡ್ರು, ಆರ್ ಟಿ ಓ ಮಲ್ಲಿಕಾರ್ಜುನ್ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಸ್ಯಾಮ್ ಪ್ರಸಾದ್ ಮದ್ಯ ವ್ಯರ್ಜನಾ ಸಮಿತಿಯ ಸದ್ಯಸರು ಪ್ರಕಾಶ್ ಜಿಲ್ಲಾ ಜನ ಜಾಗೃತಿ ಅಧ್ಯಕ್ಷರಾದ ಜಯ್ ರಾಮ್. ಚನ್ನರಾಯಪಟ್ಟಣದ ಜಿಲ್ಲಾ ನಿರ್ದೇಶಕರು ಕೇಶವ್ ದೇವಾಂಗ.ಪತ್ರಕರ್ತರು. ವಕೀಲರಾದ ನಂದೀಶ್, ಪತ್ರಕರ್ತರಾದಂತಹ ಡಾ.ನೀಲಕಂತ, ಲೋಕೇಶ್ ವಿ. ಭೂಕನಕೆರೆ ವಲಯದ ಸೇವಾಪ್ರತಿನಿಧಿಗಳು ಗ್ರಾಮಸ್ಥರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು

**ವರದಿ. ಎಸ್ ರವಿ ಹೊನ್ನೇನಹಳ್ಳಿ**

# ಮುಸ್ಲಿಂರಿಗೆ ಮತದಾನ ಹಕ್ಕು ಬೇಡ ಎಂಬ ಶ್ರೀಗಳ ಹೇಳಿಕೆ ಸರಿಯಲ್ಲ: ಸಚಿವೆ ಹೆಬ್ಬಾಳಕರ

**ವಿಜಯಪುರ :** ಸ್ವಾಮೀಜಿಗಳ ಬಗ್ಗೆ ಮಾತನಾಡುವಷ್ಟು ದೊಡ್ಡವಳಲ್ಲ .ಅದು ನಮ್ಮಸಂಸ್ಕೃತಿಯಲ್ಲ.ಸ್ವಾಮೀಜಿಗಳ ಸಂಸ್ಕೃತಿಯೂ ಅದಲ್ಲ.

ನಾವು ನಮ್ಮ ಚೌಕಟ್ಟಿನಲ್ಲಿರಬೇಕು ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ರೈತ ಘರ್ಜನೆ ಹೆಸರಿನಲ್ಲಿ ಹೋರಾಟ ಕಾರ್ಯಕ್ರಮದಲ್ಲಿ ವಿಶ್ವ ಒಕ್ಕಲಿಗರ ಸಂಸ್ಥಾನ ಮಠದ ಚಂದ್ರಶೇಖರ ನಾಥ ಸ್ವಾಮೀಜಿ ಅವರು ಭಾರತದಲ್ಲಿ ಮುಸ್ಲಿಮರಿಗೆ ಮತದಾನದ ಹಕ್ಕು ಇಲ್ಲದಂತೆ ಮಾಡಬೇಕು. ಆಗ ಎಲ್ಲರೂ ನೆಮ್ಮದಿ ಇರಲು ಸಾಧ್ಯ. ಎಲ್ಲರೂ ಸೇರಿ ವಕ್ಫ್ ಮಂಡಳಿಯೇ ಇಲ್ಲದಂತೆ ಮಾಡಬೇಕು ಎಂಬ ಹೇಳಿಕೆಗೆ ಅವರು ಪ್ರತಿಕ್ರಿಯೆ ನೀಡಿ ಬುಧವಾರ ನಗರ ಹೊರ ವಲಯದ ಅಕ್ಕ ಮಹಾದೇವಿ



ಮಹಿಳಾ ವಿವಿ ಆವರಣದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದರು.

ನಿನ್ನೆಯೇ ಸಂವಿಧಾನ ದಿನಾಚರಣೆ ಮಹೋತ್ಸವ ಆಚರಣೆ ಮಾಡಿದ್ದೇವೆ

ನಮ್ಮ ದೇಶ ಎಲ್ಲ ದಾರ್ಶನಿಕರು ಭಾಷಿಕರು ಧರ್ಮದವರು ಎಲ್ಲಾ ಜಾತಿ ಜನಾಂಗ ಒಳಗೊಂಡ ಹಕ್ಕು ನಮ್ಮ ಸಂವಿಧಾನ ನೀಡಿದೆ.ರಾಷ್ಟ್ರಪತಿಗಳಿಗೂ ಮತದಾನ ಹಕ್ಕು ಸಾಮಾನ್ಯನಿಗೂ ಇದೇ ಹಕ್ಕು ಇದೆ.

ಸ್ವಾಮಿಜಿಗಳು ಸಮಾಜದ ಸ್ವಾಸ್ಥ್ಯವನ್ನು ಕಾಪಾಡಬೇಕು. ಇಂಥ ಮಾತು ಆಡಿ ಚಪ್ಪಾಳೆ ಗಿಟ್ಟಿಸಿಕೊಳ್ಳಬಾರದು ಎಂದರು.

ಪಂಚಮಸಾಲಿ ಹೋರಾಟ ಪಕ್ಷತೀತವಾದ ಹೋರಾಟ. ಇದರಲ್ಲಿ ರಾಜಕಾರಣ ಇಲ್ಲ.

ನಾನೂಹೋರಾಟದಮುಂಚೂಣಿಯಲ್ಲಿದ್ದು ಹೋರಾಟ ಮಾಡಿದ್ದೇನೆ. ಈಗಲೂ ಹೋರಾಟ ಮಾಡುತ್ತಿದ್ದೇನೆ.

ಪಕ್ಷಾತೀತವಾಗಿ ಯಾವುದೇ ಸರ್ಕಾರದ ವಿರುದ್ದ ಅಲ್ಲ. ಸಮಾಜಕ್ಕೆ ನ್ಯಾಯ ಕೊಡಬೇಕೇಂದು ಹೋರಾಟ ಮಾಡುತ್ತಿದ್ದೇವೆ. ಇದರಲ್ಲಿ ಒಡಕು ಇಲ್ಲ ಎಂದು ಸಚಿವೆ ಹೆಬ್ಬಾಳಕರ ಹೇಳಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಉಗ್ರ ಹೋರಾಟ ಮಾಡಿ ಈಗ ಹೋರಾಟ ಮಾಡುತ್ತಿಲ್ಲ ಎಂಬ ಆರೋಪದ ಬಗ್ಗೆ ಪ್ರತಿಕ್ರಿಯೆ ನೀಡಿದ ಸಚಿವೆ,

ಮೊದಲಿನಂತೆ ಹೋರಾಟವಿದೆ ಸಚಿವೆಯಾದ ಕಾರಣ ಕೆಲಸಗಳ ಒತ್ತಡವಿರುವ ಕಾರಣ ಕೆಲ ಹೋರಾಟದಲ್ಲಿ ಭಾಗಿಯಾಗಿಲ್ಲ.

ಕೆಲ ಹೋರಾಟಗಳಿಗೆ ನನ್ನ ಸಹೋದರ ಹಾಗೂ ಪುತ್ರನನ್ನು ಕಳುಹಿಸಿದ್ದೇನೆ.

ಕೆಲ ಹೋರಾಟಗಳ ದಿನಾಂಕ ಹೊಂದಾಣಿಕೆಯಾಗದ ಕಾರಣ ಹೋಗಿಲ್ಲ. ಸಮಾಜ ಬಿಟ್ಟು ನಾನಿಲ್ಲ ಎಂದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State